ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು

JSS MAHAVIDYAPEETHA, MYSURU

# ಜೆಎಸ್‌ಎಸ್ ವಾರ್ತಾಪತ್ರ

ಮಾಸಪತ್ರಿಕೆ

# JSS VARTHAPATHRA

*Monthly Magazine*

ಸಂಪುಟ 8 ಸಂಚಿಕೆ 2 ಫೆಬ್ರವರಿ 2023



ಶ್ರೀ ಸುತ್ತೂರು ಕ್ಷೇತ್ರದಲ್ಲಿ ವಿಜೃಂಭಣೆಯಿಂದ ಜರುಗಿದ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ರಥೋತ್ಸವ



ಜಾತ್ರಾ ಮಹೋತ್ಸವದಲ್ಲಿ ಏರ್ಪಡಿಸಿದ್ದ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ತಿರುಮಲೈ ತಂಬು, ಶ್ರೀ ಎಸ್.ಟಿ. ಸೋಮಶೇಖರ್, ಶ್ರೀ ಎಸ್.ಎ. ರಾಮದಾಸ್, ಶ್ರೀ ಸಿ.ಸಿ. ಪಾಟೀಲ್, ಹುಕ್ಕೇರಿ ಹಾಗೂ ವಾಸವಿ ಪೀಠದ ಶ್ರೀಗಳು ಮೊದಲಾದವರಿದ್ದಾರೆ (19 ಜನವರಿ 2023)



ಜಾತ್ರಾ ಮಹೋತ್ಸವದ ಅಂಗವಾಗಿ ನೆರವೇರಿದ ಲಕ್ಷದೀಪೋತ್ಸವ (21 ಜನವರಿ 2023)

## ಸುತ್ತೂರು ಜಾತ್ರಾ ಮಹೋತ್ಸವ 2023

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಜನವರಿ 18ರಿಂದ 23ರವರೆಗೆ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವವು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ವಿಜೃಂಭಣೆಯಿಂದ ಜರುಗಿತು.

## ಭಜನಾ ಕಲೆಯನ್ನು ಉಳಿಸಿ ಬೆಳೆಸುವ ಅಗತ್ಯವಿದೆ



ಜಾತ್ರಾ ಮಹೋತ್ಸವದಲ್ಲಿ ಸಚಿವರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಭಜನಾಂಜಲಿ ಕೃತಿ ಬಿಡುಗಡೆಗೊಳಿಸಿದರು. ಪ್ರೊ. ಸಿ. ಬಸವರಾಜು, ಶ್ರೀ ಕಾನಾಡಿ ಗೋವಿಂದ ಭಟ್ ಮೊದಲಾದವರಿದ್ದಾರೆ

ಭಜನಾ ಕಲೆಯನ್ನು ಉಳಿಸಿ ಬೆಳೆಸುವ ಅಗತ್ಯವಿದೆ ಎಂದು ಸಚಿವರಾದ ಶ್ರೀ ಕೋಟ ಶ್ರೀನಿವಾಸ್ ಪೂಜಾರಿಯವರು ಹೇಳಿದರು.

ಜಾತ್ರಾ ಮಹೋತ್ಸವದಲ್ಲಿ ದಿನಾಂಕ 18.1.2023ರಂದು ಭಜನಾಂಜಲಿ ಕೃತಿ ಬಿಡುಗಡೆಗೊಳಿಸಿ ಮಾತನಾಡಿದ ಅವರು ಸಾರ್ವಜನಿಕ ಜೀವನವನ್ನು ಒಂದಾಗಿಸುವ ಶಕ್ತಿ ಭಜನೆಗಿದೆ. ಹಿಂದೆ ಮನೆಗಳಲ್ಲಿ ಭಜನೆ ಮಾಡದೆ ಊಟ ಮಾಡುತ್ತಿರಲಿಲ್ಲ. ನಮ್ಮ ಹಿರಿಯರು ವೃದ್ಧಾಶ್ರಮಗಳಲ್ಲಿ ಬಂಧಿಯಾಗಿರುವುದು ಇಂದು ಭಜನಾ ಕಲೆ ಕಾಣೆಯಾಗುವುದಕ್ಕೆ ಪ್ರಮುಖ ಕಾರಣವಾಗಿದೆ. ಸುತ್ತೂರು ಶ್ರೀಗಳು ಈ ಭಾಗದಲ್ಲಿ ಅನೇಕ ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಿದ್ದಾರೆ. ಅವರ ಮಾರ್ಗದರ್ಶನ ಸಮಾಜಕ್ಕೆ ಸದಾ ಇರಬೇಕು ಎಂದು ಹೇಳಿದರು.

ರಾಜ್ಯ ಧಾರ್ಮಿಕ ಪರಿಷತ್ ಸದಸ್ಯರಾದ ಶ್ರೀ ಕಾನಾಡಿ ಗೋವಿಂದ ಭಟ್, ಕಾನೂನು ವಿವಿ ಕುಲಪತಿಗಳಾದ ಪ್ರೊ. ಸಿ. ಬಸವರಾಜುರವರುಗಳು ಮಾತನಾಡಿದರು.

**ಮಾಸಿಕ ಸಾಮೂಹಿಕ ವಿವಾಹ – 2023 ಶ್ರೀ ಸುತ್ತೂರು ಕ್ಷೇತ್ರ**

**ಮಾರ್ಚ್ 17, ಶುಕ್ರವಾರ**

**ವಿವರಗಳಿಗೆ ಸಂಪರ್ಕಿಸಿ:**

**ಆಡಳಿತಾಧಿಕಾರಿಗಳು, ಜೆಎಸ್‌ಎಸ್ ಸಂಸ್ಥೆಗಳು, ಸುತ್ತೂರು**
**ದೂರವಾಣಿ : 08221–232223, 232224**

# ಸಾಮಾಜಿಕ ಬದಲಾವಣೆಗೆ ಸುತ್ತೂರು ಶ್ರೀಮಠದ ಕಾರ್ಯವೈಖರಿ ಮಾದರಿ



ಜಾತ್ರಾ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ವಸ್ತುಪ್ರದರ್ಶನ, ಕೃಷಿಮೇಳ, ಸಿರಿಧಾನ್ಯಮೇಳ, ಸಾಂಸ್ಕೃತಿಕ ಮೇಳ, ಆರೋಗ್ಯ ತಪಾಸಣಾ ಶಿಬಿರ, ದೋಣಿ ವಿಹಾರ, ರಂಗೋಲಿ ಹಾಗೂ ಸೋಬಾನೆ ಪದ ಸ್ಪರ್ಧೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ವಿ. ಲೋಕೇಶ್, ಶ್ರೀ ಎಂ. ಶಿವಣ್ಣ, ಶ್ರೀ ಮರಿತಿಬ್ಬೇಗೌಡ, ಡಾ. ಯತೀಂದ್ರ ಸಿದ್ಧರಾಮಯ್ಯ, ಶ್ರೀ ಬಿ.ಸಿ. ಪಾಟೀಲ್, ಶ್ರೀ ಎ. ನಾರಾಯಣಸ್ವಾಮಿ, ಎಡನೀರು ಮಠ ಮತ್ತು ಹೊಸಮಠದ ಶ್ರೀಗಳು, ಶ್ರೀ ಜಗದೀಶ ಎಸ್. ಶೆಟ್ಟರ್, ಶ್ರೀ ಬಿ.ವೈ. ವಿಜಯೇಂದ್ರ, ಶ್ರೀ ಸಿ.ಎಸ್. ನಿರಂಜನಕುಮಾರ್, ಶ್ರೀ ಎಂ. ರುದ್ರೇಶ್‌ರವರುಗಳಿದ್ದಾರೆ

ಸಾಮಾಜಿಕ ಬದಲಾವಣೆಗೆ ಸುತ್ತೂರು ಶ್ರೀಮಠದ ಕಾರ್ಯವೈಖರಿಗಳು ಮಾದರಿಯಾಗಿವೆ ಎಂದು ಶಾಸಕರು ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ್ ಎಸ್. ಶೆಟ್ಟರ್‌ರವರು ಹೇಳಿದರು.

ಜಾತ್ರಾ ಮಹೋತ್ಸವದಲ್ಲಿ ದಿನಾಂಕ 18.1.2023ರಂದು ನಡೆದ ವಸ್ತುಪ್ರದರ್ಶನ, ಕೃಷಿ, ಸಿರಿಧಾನ್ಯ ಮತ್ತು ಸಾಂಸ್ಕೃತಿಕ ಮೇಳ, ಆರೋಗ್ಯ ತಪಾಸಣಾ ಶಿಬಿರ, ರಂಗೋಲಿ ಹಾಗೂ ಸೋಬಾನೆ ಪದ ಸ್ಪರ್ಧೆ, ದೋಣಿ ವಿಹಾರ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಮಠಮಾನ್ಯಗಳು ಧಾರ್ಮಿಕ ಜಾಗೃತಿಯೊಂದಿಗೆ ಶೈಕ್ಷಣಿಕ, ಆರೋಗ್ಯ ಕ್ಷೇತ್ರದಲ್ಲಿ ಅರಿವು ಮೂಡಿಸಿದಾಗ ಸಾಮಾಜಿಕ ಬದಲಾವಣೆ ಖಂಡಿತ ಸಾಧ್ಯ ಎಂದು ಹೇಳಿದರು.

ಕೇಂದ್ರದ ಸಾಮಾಜಿಕ ಸಬಲೀಕರಣ ಖಾತೆ ರಾಜ್ಯ ಸಚಿವರಾದ ಶ್ರೀ ಎ. ನಾರಾಯಣಸ್ವಾಮಿಯವರು ಭಾರತೀಯ ಸಂಸ್ಕೃತಿ ಪರಂಪರೆಯ ಕಲಾವೈಭವ ಈ ಜಾತ್ರೆಯಲ್ಲಿ ಮೇಳೈಸಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಚಿವರಾದ ಶ್ರೀ ಬಿ.ಸಿ. ಪಾಟೀಲ್ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಸಾಧ್ಯವಾಗದ ಕೆಲಸಗಳನ್ನು ಶ್ರೀಮಠ ಇಲ್ಲಿ ಮಾಡಿ ತೋರಿಸಿದೆ. ರೈತರ ಮಕ್ಕಳಿಗೆ ನೆರವಾಗುವ ನಿಟ್ಟಿನಲ್ಲಿ ಸರ್ಕಾರದ ವತಿಯಿಂದ ವಿವಿಧ ಯೋಜನೆಗಳನ್ನು ಜಾರಿಗೆ ತರಲಾಗಿದೆ. ರೈತರಿಗೆ ನೆರವಾಗುವ ನಿಟ್ಟಿನಲ್ಲಿ ಸಬ್ಸಿಡಿ ನೀಡಲಾಗುತ್ತಿದೆ ಎಂದು ತಿಳಿಸಿದರು.

ಶಾಸಕರಾದ ಡಾ. ಯತೀಂದ್ರ ಸಿದ್ಧರಾಮಯ್ಯನವರು ಎರಡು ವರ್ಷಗಳ ನಂತರ ಅದ್ದೂರಿಯಾಗಿ ಜಾತ್ರೆ ನಡೆಯುತ್ತಿದೆ. ಆಧ್ಯಾತ್ಮಿಕ, ಸಾಮಾಜಿಕ, ವೈಜ್ಞಾನಿಕ ಜ್ಞಾನ ಸರೋವರದ ಜಾತ್ರೆಯಿದು ಎಂದರು.

ರಾಜ್ಯ ಬಿಜೆಪಿ ಉಪಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರರವರು ಸುತ್ತೂರು ಮಠ ಜ್ಞಾನ ಸಾಗರದಂತಿದೆ. ಜಾತ್ರೆಗಳು ಸಂಸ್ಕೃತಿಯ ರಾಯಭಾರಿ ಮತ್ತು ಪರಂಪರೆಯ ಕೊಂಡಿ ಎಂದು ತಿಳಿಸಿದರು.

ಕಾಸರಗೋಡು ಶ್ರೀ ಎಡನೀರು ಮಠದ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳು, ಹೊಸಮಠ ಶ್ರೀಗಳು ಸಮ್ಮುಖ ವಹಿಸಿದ್ದರು. ಶಾಸಕರುಗಳಾದ ಶ್ರೀ ಮರಿತಿಬ್ಬೇಗೌಡ, ಶ್ರೀ ಸಿ.ಎಸ್. ನಿರಂಜನಕುಮಾರ್, ಶ್ರೀ ಎಂ. ಶಿವಣ್ಣ, ಶ್ರೀ ಎಂ. ರುದ್ರೇಶ್, ಶ್ರೀ ಮರಿಸ್ವಾಮಿ, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕರಾದ ಡಾ. ವಿ. ಲೋಕೇಶ್, ಶ್ರೀಮತಿ ಶಿಲ್ಪಾ ಶೆಟ್ಟರ್ ಉಪಸ್ಥಿತರಿದ್ದರು.

## ಒಂದಾಗಿ ನಡೆದರೆ ಜೀವನ ಸುಂದರ




ಜಾತ್ರಾ ಮಹೋತ್ಸವದಲ್ಲಿ ಏರ್ಪಡಿಸಿದ್ದ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ತಿರುಮಲೈ ತಂಬು, ಶ್ರೀ ಎಸ್.ಟಿ. ಸೋಮಶೇಖರ್, ಶ್ರೀ ಎಸ್.ಎ. ರಾಮದಾಸ್, ಶ್ರೀ ಸಿ.ಸಿ. ಪಾಟೀಲ್, ಹುಕ್ಕೇರಿ ಹಾಗೂ ವಾಸವಿ ಪೀಠದ ಶ್ರೀಗಳು ಮೊದಲಾದವರಿದ್ದಾರೆ

ಪವಿತ್ರವಾದ ದಾಂಪತ್ಯ ಜೀವನಕ್ಕೆ ಕಾಲಿರಿಸಿದವರು ಒಂದಾಗಿ ನಡೆದರೆ ಬದುಕು ಸುಂದರವಾಗಿರುತ್ತದೆ ಎಂದು ಹುಕ್ಕೇರಿಯ ಶ್ರೀ ಗುರುಶಾಂತೇಶ್ವರ ಸಂಸ್ಥಾನ ಹಿರೇಮಠದ ಡಾ. ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಹೇಳಿದರು.

ಜಾತ್ರಾ ಮಹೋತ್ಸವದಲ್ಲಿ ದಿನಾಂಕ 19.1.2023ರಂದು ನಡೆದ ಸಾಮೂಹಿಕ ವಿವಾಹದ ಸಮ್ಮುಖ ವಹಿಸಿ ಸುತ್ತೂರು ಮಠದಲ್ಲಿ ಪ್ರೀತಿ ಪದ್ಧತಿಯ ಹೊರತು ಬೇರೆ ಯಾವ ಪದ್ಧತಿಯೂ ಇಲ್ಲ. ಸುತ್ತೂರು ಶ್ರೀಗಳು ಮಾನವ ಧರ್ಮದ ಬಿತ್ತನೆ ಮಾಡುತ್ತಿದ್ದಾರೆ ಎಂದರು.

ಸಚಿವರಾದ ಶ್ರೀ ಸಿ.ಸಿ. ಪಾಟೀಲ್‌ರವರು ಸುತ್ತೂರು ಜಾತ್ರೆಯ ಸಾಮೂಹಿಕ ವಿವಾಹದಲ್ಲಿ ಹಲವು ಜಾತಿಯವರು ಒಂದೇ ವೇದಿಕೆಯಲ್ಲಿ ವಿವಾಹವಾಗುವ ಮೂಲಕ ಸಾಮಾಜಿಕ ಸೌಹಾರ್ದತೆಯನ್ನು ಸಾರುತ್ತಿದ್ದಾರೆ. ಈ ಸಾಮೂಹಿಕ ವಿವಾಹ ಸಾಮಾಜಿಕ ಸಾಮರಸ್ಯವನ್ನು ಪ್ರತಿನಿಧಿಸುತ್ತಿದೆ ಎಂದು ಹೇಳಿದರು.

ಈ ಬಾರಿಯ ಸಾಮೂಹಿಕ ವಿವಾಹದಲ್ಲಿ 114 ಜೋಡಿ ವಧೂವರರು ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್ ಪ್ರತಿಜ್ಞಾವಿಧಿ ಬೋಧಿಸಿ, ಪ್ರಮಾಣಪತ್ರ ವಿತರಿಸಿದರು. ಬೆಂಗಳೂರು ವಾಸವಿ ಪೀಠದ ಶ್ರೀ ಸಚ್ಚಿದಾನಂದ ಸ್ವಾಮಿಗಳು, ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಎಸ್.ಎ. ರಾಮದಾಸ್, ಜೆ.ಕೆ. ಟೈರ್ಸ್‌ನ ಉಪಾಧ್ಯಕ್ಷರಾದ ಶ್ರೀ ವುಪ್ಪು ಈಶ್ವರರಾವ್, ಅಮೆರಿಕದ ಶ್ರೀಮತಿ ಭಾರತೀ ರೆಡ್ಡಿ, ಉದ್ಯಮಿಗಳಾದ ಶ್ರೀ ತಿರುಮಲೈ ತಂಬು, ಕೆಪಿಎಸ್‌ಸಿ ಸದಸ್ಯರಾದ ಡಾ. ಬಿ. ಪ್ರಭುದೇವ, ಎಸ್‌ಪಿ ಶ್ರೀಮತಿ ಸೀಮಾ ಲಾಟ್ಕರ್‌ರವರುಗಳು ಮಾತನಾಡಿದರು. ಉದ್ಯಮಿಗಳಾದ ಶ್ರೀ ಎಸ್.ಎಸ್. ಗಣೇಶ್, ಆದಾಯ ತೆರಿಗೆ ಇಲಾಖೆಯ ಆಯುಕ್ತರಾದ ಶ್ರೀ ಸತೀಶ ಮಿಲಿಂದ, ಡಾ. ಸಿ.ಜಿ. ಬೆಟಸೂರಮಠ, ಶ್ರೀ ಎಸ್.ಪಿ. ಮಂಜುನಾಥ್ ಮೊದಲಾದವರುಗಳು ಉಪಸ್ಥಿತರಿದ್ದರು.

ಆಸೆಗೆ ಸತ್ತುದು ಕೋಟಿ, ಆಮಿಷಕ್ಕೆ ಸತ್ತುದು ಕೋಟಿ
ಹೊನ್ನು ಹೆಣ್ಣು ಮಣ್ಣಿಂಗೆ ಸತ್ತುದು ಕೋಟಿ
ಗುಹೇಶ್ವರಾ, ನಿಮಗಾಗಿ ಸತ್ತವರನಾರನೂ ಕಾಣೆ

**ಅಲ್ಲಮಪ್ರಭು**

# ಮಠಗಳ ಸೇವೆ ಅಗ್ರಗಣ್ಯವಾದುದು



ಜಾತ್ರಾ ಮಹೋತ್ಸವದಲ್ಲಿ ರಾಜ್ಯಮಟ್ಟದ ಭಜನಾಮೇಳ ಹಾಗೂ ಕಟ್ಟಡಗಳನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಅರವಿಂದ ಬೆಲ್ಲದ, ಶ್ರೀಮತಿ ತ್ರಿವೇಣಿ ಮಾಧುಸ್ವಾಮಿ, ಶ್ರೀ ಜೆ.ಸಿ. ಮಾಧುಸ್ವಾಮಿ, ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ನಾಗನೂರು ಹಾಗೂ ದೇವನೂರು ಮಠಗಳ ಶ್ರೀಗಳು, ಶ್ರೀ ಸೊಗಡು ಶಿವಣ್ಣ, ಡಾ. ಪ್ರಕಾಶರಾವ್ ವೆಲಗಪುಡಿ ಮತ್ತು ಚುಂಚನಹಳ್ಳಿ ಶ್ರೀಗಳಿದ್ದಾರೆ

ವೀರಶೈವ ಲಿಂಗಾಯತ ಮಠಗಳ ಸೇವೆ ಅಗ್ರಗಣ್ಯವಾದುದು ಎಂದು ವಿಧಾನಸಭಾಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಹೇಳಿದರು.

ಜಾತ್ರಾ ಮಹೋತ್ಸವದಲ್ಲಿ ದಿನಾಂಕ 19.1.2023ರಂದು ನಡೆದ ರಾಜ್ಯಮಟ್ಟದ ಭಜನಾಮೇಳ ಹಾಗೂ ಶ್ರೀ ಭಂಡಾರಿ ಬಸಪ್ಪ ಒಡೆಯರ್ ಮತ್ತು ಶ್ರೀ ಚಿದ್ವನ ಶಿವಾಚಾರ್ಯ ಕಾಂಪ್ಲೆಕ್ಸ್‌ಗಳ ಉದ್ಘಾಟನೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ವೀರಶೈವ ಲಿಂಗಾಯತ ಮಠಗಳು ಅನನ್ಯವಾದ ಸೇವೆಯನ್ನು ಸಲ್ಲಿಸುತ್ತಿವೆ. ಹಣ ಗಳಿಕೆಯೇ ಶಿಕ್ಷಣದ ಉದ್ದೇಶವಾಗಬಾರದು. ಕೌಟುಂಬಿಕ ವ್ಯವಸ್ಥೆ ಕುಸಿಯಲು ಇಂದಿನ ಶಿಕ್ಷಣವೂ ಒಂದು ಕಾರಣವಾಗಿದೆ ಎಂದರು.

ಸಚಿವರಾದ ಶ್ರೀ ಜೆ.ಸಿ. ಮಾಧುಸ್ವಾಮಿಯವರು ಈ ಭಾಗದಲ್ಲಿ ಭಜನೆಯನ್ನು ಪಸರಿಸಿದವರಲ್ಲಿ ಮಲೆ ಮಹದೇಶ್ವರರು ಒಬ್ಬರು. ಅಭಿವೃದ್ಧಿ ಎಂದರೆ ಏನು ಎಂಬುದನ್ನು ಸುತ್ತೂರು ಶ್ರೀಮಠ ತೋರಿಸಿದೆ. ನಮ್ಮ ಶರೀರ ಇರುವುದೇ ಬೇರೆಯವರಿಗೆ ಉಪಕರಿಸಲು ಎಂಬುದನ್ನು ಅರಿತರೆ ಸಮಾಜದಲ್ಲಿ ಶಾಂತಿ, ನೆಮ್ಮದಿ ನೆಲೆಸಲು ಸಾಧ್ಯ ಎಂದು ತಿಳಿಸಿದರು.

ಶ್ರೀ ನಾಗನೂರು ರುದ್ರಾಕ್ಷಿಮಠದ ಡಾ. ಶ್ರೀ ಅಲ್ಲಮಪ್ರಭು ಸ್ವಾಮಿಗಳು, ದೇವನೂರು ಮಠದ ಶ್ರೀ ಮಹಾಂತ ಸ್ವಾಮಿಗಳು ಸಮ್ಮುಖ ವಹಿಸಿದ್ದರು. ಶಾಸಕರಾದ ಶ್ರೀ ಅರವಿಂದ ಬೆಲ್ಲದ, ಮಾಜಿ ಸಚಿವರಾದ ಶ್ರೀ ಸೊಗಡು ಶಿವಣ್ಣ, ಕೇಂದ್ರ ಜಿಎಸ್‌ಟಿ ಅಧಿಕಾರಿಗಳಾದ ಶ್ರೀ ಕೆ.ಸಿ. ಜಾನಿ, ಅಮೆರಿಕದ ಡಾ. ಪ್ರಕಾಶರಾವ್ ವೆಲಗಪುಡಿ ಮಾತನಾಡಿದರು.

ಕರಿಯಂಜುವುದು ಅಂಕುಶಕ್ಕಯ್ಯಾ
ಗಿರಿಯಂಜುವುದು ಕುಲಿಶಕ್ಕಯ್ಯಾ
ತಮಂಧವಂಜುವುದು ಜ್ಯೋತಿಗಯ್ಯಾ
ಕಾನನವಂಜುವುದ ಬೇಗೆಗಯ್ಯಾ
ಪಂಚಮಹಾಪಾತಕವಂಜುವುದು
ಕೂಡಲಸಂಗನ ನಾಮಕ್ಕಯ್ಯಾ

**ಬಸವಣ್ಣ**

## ಶ್ರೀ ಸುತ್ತೂರು ಮಠ ಮಾದರಿ



ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜಾತ್ರಾ ಮಹೋತ್ಸವದಲ್ಲಿ ರಥೋತ್ಸವ ಮತ್ತು ನೂತನ ಕಟ್ಟಡಗಳ ಉದ್ಘಾಟನೆ ಕಾರ್ಯಕ್ರಮ ನೆರವೇರಿತು. ಶ್ರೀ ಕೆ.ಪಿ. ಮಹದೇವಸ್ವಾಮಿ, ಡಾ. ಸಿ. ಸೋಮಶೇಖರ, ಶ್ರೀ ವಿಶ್ವೇಶ್ವರ ಭಟ್, ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶ್ರೀ ಬಿ.ಎಸ್. ಯಡಿಯೂರಪ್ಪ, ಶ್ರೀ ಭಗೀರಥ ಉಪ್ಪಾರ ಪೀಠದ ಜಗದ್ಗುರುಗಳು, ಶ್ರೀಮತಿ ಅಶ್ವಿನಿ ಸಿದ್ದರಾಮಯ್ಯ, ಶ್ರೀ ಎಸ್. ಮಹದೇವಯ್ಯನವರುಗಳಿದ್ದಾರೆ

ವೈಜ್ಞಾನಿಕ ಕೃಷಿ ಪದ್ಧತಿಗಳನ್ನು ಪರಿಚಯಿಸುವ ಮೂಲಕ ಸುತ್ತೂರು ಶ್ರೀಮಠ ಮಾದರಿಯಾಗಿದೆ ಎಂದು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಹೇಳಿದರು.

ಜಾತ್ರಾ ಮಹೋತ್ಸವದಲ್ಲಿ ದಿನಾಂಕ 20.1.2023ರಂದು ನಡೆದ ರಥೋತ್ಸವ ಮತ್ತು ರಥದ ಮನೆ, ಶ್ರೀ ಪರ್ವತೇಂದ್ರ ಶಿವಾಚಾರ್ಯ ಕಾಂಪ್ಲೆಕ್ಸ್‌ಗಳ ಉದ್ಘಾಟನೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಮಠಗಳು ಶೋಷಿತರಿಗೆ ಆಶ್ರಯವಾಗಿವೆ. ಆ ನಿಟ್ಟಿನಲ್ಲಿ ಜ್ಞಾನ, ಅನ್ನ, ಆರೋಗ್ಯ ದಾಸೋಹ ಕಾರ್ಯವನ್ನು ಅವುಗಳು ಮಾಡುತ್ತಿವೆ ಎಂದರು.

ರಥದ ಮನೆ ಉದ್ಘಾಟಿಸಿದ ರಾಜವಂಶಸ್ಥರಾದ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್‌ರವರು ಸುತ್ತೂರಿನ ಪರಿಸರಸ್ನೇಹಿ ವಾತಾವರಣ ಅತ್ಯಂತ ಆನಂದ ನೀಡುತ್ತದೆ. ಅತಿಯಾದ ಪ್ಲಾಸ್ಟಿಕ್ ಬಳಕೆಯಿಂದ ಪರಿಸರ ಮಾಲಿನ್ಯ ಉಂಟಾಗುತ್ತಿದೆ. ಈ ವಿಷಯದಲ್ಲಿ ನಾವೆಲ್ಲರೂ ಆಲೋಚಿಸಬೇಕಿದೆ. ಮಠಗಳು ಜಾತ್ರೆಯ ಮೂಲಕ ರೈತರ ಸಬಲೀಕರಣ, ಸಮಾಜದ ಸುಧಾರಣೆಗೆ ಕಾರಣವಾಗಿವೆ. ಅರಮನೆಗೂ ಶ್ರೀಮಠಕ್ಕೂ ನಿಕಟ ಸಂಬಂಧವಿದೆ. ರಾಜೇಂದ್ರ ಶ್ರೀಗಳು ಮತ್ತು ಜಯಚಾಮರಾಜ ಒಡೆಯರ್ ನಡುವೆ ಅನ್ಯೋನ್ಯ ಬಾಂಧವ್ಯವಿತ್ತು ಎಂದು ತಿಳಿಸಿದರು.

ಸಚಿವರಾದ ಶ್ರೀ ಬೈರತಿ ಬಸವರಾಜ್ ಶ್ರೀ ಪರ್ವತೇಂದ್ರ ಶಿವಾಚಾರ್ಯ ಕಾಂಪ್ಲೆಕ್ಸ್ ಉದ್ಘಾಟಿಸಿದರು. ಶ್ರೀ ಭಗೀರಥ ಉಪ್ಪಾರ ಪೀಠದ ಜಗದ್ಗುರು ಶ್ರೀ ಪುರುಷೋತ್ತಮಾನಂದಪುರಿ ಮಹಾಸ್ವಾಮಿಗಳು ಸಮ್ಮುಖ ವಹಿಸಿದ್ದರು. ವಿಶ್ವವಾಣಿ ಪ್ರಧಾನ ಸಂಪಾದಕರಾದ ಶ್ರೀ ವಿಶ್ವೇಶ್ವರ ಭಟ್, ಡಾ. ಸಿ. ಸೋಮಶೇಖರ್, ಶ್ರೀ ಕಾ.ಪು. ಸಿದ್ಧಲಿಂಗಸ್ವಾಮಿ, ಶ್ರೀಮತಿ ವೀಣಾ ತೋಟಕುರ, ಶ್ರೀ ಕೆ.ಪಿ. ಮಹದೇವಸ್ವಾಮಿ ಉಪಸ್ಥಿತರಿದ್ದರು.

ತಾಳಮರದ ಕೆಳಗೆ ಒಂದು ಹಾಲ ಹರವಿಯಿದ್ದಡೆ
ಅದ ಹಾಲಹರವಿಯೆನ್ನರು; ಸುರೆಯ ಹರವಿಯೆಂಬರು
ಈ ಭಾವನಿಂದೆಯ ಮಾಣಿಸಾ
ಕೂಡಲಸಂಗಮದೇವಾ

**ಬಸವಣ್ಣ**

## ಜಾತ್ಯತೀತ ಶ್ರೀ ಸುತ್ತೂರು ಮಠ



ಜಾತ್ರಾ ಮಹೋತ್ಸವದಲ್ಲಿ ದೇಸಿ ಆಟಗಳು, ಚಿತ್ರಕಲಾ ಸ್ಪರ್ಧೆ ಮತ್ತು ಗಾಳಿಪಟ ಸ್ಪರ್ಧೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ವಿರೋಧಪಕ್ಷದ ನಾಯಕರು ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಉದ್ಘಾಟಿಸಿದರು. ಶ್ರೀ ಉಮೇಶ್ ಪಿ. ಮೂರ್ತಿ, ಡಾ. ಮಂಜಮ್ಮ ಜೋಗತಿ, ಶ್ರೀ ಆರ್. ನರೇಂದ್ರ, ಡಾ. ಹೆಚ್.ಸಿ. ಮಹದೇವಪ್ಪ, ಉಡುಪಿ ಶ್ರೀ ಅದಮಾರು ಮಠದ ಶ್ರೀಪಾದಂಗಳು ಮೊದಲಾದವರಿದ್ದಾರೆ

ಜಾತೀಯತೆ ಹೋಗಲಾಡಿಸಲು ಶ್ರೀ ಸುತ್ತೂರು ಮಠ ಶ್ರಮಿಸುತ್ತಿದೆ ಎಂದು ವಿರೋಧ ಪಕ್ಷದ ನಾಯಕರು ಮತ್ತು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಹೇಳಿದರು.

ಜಾತ್ರಾ ಮಹೋತ್ಸವದಲ್ಲಿ ದಿನಾಂಕ 20.1.2023ರಂದು ನಡೆದ ದೇಸಿ ಆಟಗಳು, ಚಿತ್ರಕಲಾ ಸ್ಪರ್ಧೆ ಮತ್ತು ಗಾಳಿಪಟ ಸ್ಪರ್ಧೆ ಉದ್ಘಾಟನೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಅಸಮಾನತೆಗೆ ನಮ್ಮಲ್ಲಿನ ಜಾತಿ ವ್ಯವಸ್ಥೆಯೇ ಕಾರಣ. ಅದನ್ನು ತೊಡೆದು ಹಾಕಲು ಸಂತರು, ದಾರ್ಶನಿಕರು, ಮಠಾಧೀಶರುಗಳು ಪ್ರಯತ್ನಿಸುತ್ತಿದ್ದಾರೆ. ಬದುಕಿಗೆ ಕ್ರೀಡೆ ಅತಿಮುಖ್ಯ. ಸುತ್ತೂರು ಮಠ ದೇಸಿ ಆಟಗಳನ್ನು ಪ್ರೋತ್ಸಾಹಿಸುವ ಕೆಲಸ ಮಾಡುತ್ತಿದೆ ಎಂದರು.

ಉಡುಪಿ ಶ್ರೀ ಅದಮಾರು ಮಠದ ಶ್ರೀ ಈಶಪ್ರಿಯ ತೀರ್ಥ ಶ್ರೀಪಾದಂಗಳು, ವಾಟಾಳು ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಸಮ್ಮುಖ ವಹಿಸಿದ್ದರು. ಮಾಜಿ ಸಚಿವರುಗಳಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ಡಾ. ಹೆಚ್.ಸಿ. ಮಹದೇವಪ್ಪ, ಶ್ರೀ ಯು.ಟಿ. ಖಾದರ್, ಶಾಸಕರುಗಳಾದ ಶ್ರೀ ಕುಮಾರ ಬಂಗಾರಪ್ಪ, ಶ್ರೀ ಎನ್. ಮಹೇಶ್, ಶ್ರೀ ಆರ್. ನರೇಂದ್ರ, ಡಾ. ಮಂಜಮ್ಮ ಜೋಗತಿ, ಶ್ರೀ ಉಮೇಶ್ ಪಿ. ಮೂರ್ತಿ ಮಾತನಾಡಿದರು. ಶ್ರೀಮತಿ ಗೀತಾ ಮಹದೇವಪ್ರಸಾದ್, ಶ್ರೀ ಕಳಲೆ ಕೇಶವಮೂರ್ತಿ, ಶ್ರೀ ಜಯಣ್ಣ, ಶ್ರೀ ವೆಂಕಟೇಶ್, ಶ್ರೀ ಎ.ಆರ್. ಕೃಷ್ಣಮೂರ್ತಿ, ಡಾ. ಪುಷ್ಪಾ ಅಮರನಾಥ್, ಶ್ರೀ ಜಿ. ನಿಜಗುಣರಾಜು ಮೊದಲಾದವರುಗಳು ಉಪಸ್ಥಿತರಿದ್ದರು.

ಆಧಾರದಲ್ಲಿ ಬ್ರಹ್ಮ ಸ್ವಾಯತವಾದ
ಸ್ವಾಧಿಷ್ಠಾನದಲ್ಲಿ ವಿಷ್ಣು ಸ್ವಾಯತವಾದ
ಮಣಿಪೂರಕದಲ್ಲಿ ರುದ್ರ ಸ್ವಾಯತವಾದ
ಅನಾಹತದಲ್ಲಿ ಈಶ್ವ ಸ್ವಾಯತವಾದ
ವಿಶುದ್ಧಿಯಲ್ಲಿ ಸದಾಶಿವ ಸ್ವಾಯತವಾದ
ಆಜ್ಞೆಯಲ್ಲಿ ಉಪಮಾತೀತ ಸ್ವಾಯತವಾದ
ಇವರೆಲ್ಲರು ಬಯಲಲೆ ಹುಟ್ಟಿ ಬಯಲಲೆ ಬೆಳೆದು
ಬಯಲ ಲಿಂಗವನೆ ಧರಿಸಿಕೊಂಡು ಬಯಲನೆ ಆರಾಧಿಸಿ
ಬಯಲಾಗಿ ಹೋದುದ ಕಂಡೆ ಗುಹೇಶ್ವರಾ

**ಅಲ್ಲಮಪ್ರಭು**

## ಸಿರಿಧಾನ್ಯಗಳಿಗೆ ಅಂತಾರಾಷ್ಟ್ರೀಯ ಮಾರುಕಟ್ಟೆ ಸೃಷ್ಟಿಸಿಕೊಳ್ಳಬೇಕಿದೆ




ಜಾತ್ರಾ ಮಹೋತ್ಸವದಲ್ಲಿ ಸಿರಿಧಾನ್ಯ ಮಹತ್ವ ಕುರಿತ ವಿಚಾರಸಂಕಿರಣವನ್ನು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಸಚಿವರಾದ ಕು. ಶೋಭಾ ಕರಂದ್ಲಾಜೆಯವರು ಉದ್ಘಾಟಿಸಿದರು. ಡಾ. ಹೆಚ್.ವಿ. ದಿವ್ಯಾ, ಶ್ರೀ ಎಂ.ಎನ್. ದಿನೇಶಕುಮಾರ್, ಡಾ. ವಿ. ಹೇಮಲಾ ನಾಯಕ್, ಶ್ರೀ ಹೆಚ್.ಆರ್. ರಂಗನಾಥ್, ಸಭಾಪತಿಗಳಾದ ಶ್ರೀ ಬಸವರಾಜ ಎಸ್. ಹೊರಟ್ಟಿ, ಶ್ರೀ ಸಿ.ಆರ್. ಮುಕುಂದ್, ಆದಿಜಾಂಬವ ಮಠದ ಶ್ರೀಗಳು, ಡಾ. ವಿ. ವೆಂಕಟಸುಬ್ರಮಣಿಯನ್, ಶ್ರೀಮತಿ ಸರಿತಾ ಪುರುಷೋತ್ತಮ್, ಶ್ರೀ ದುಗ್ಗಹಟ್ಟಿ ಸುರೇಶ್, ಶ್ರೀಮತಿ ಸುಧಾ ಮಹದೇವಪ್ಪ, ಪ್ರೊ. ರವಿ ಕೋರಿಶೆಟ್ಟರ್, ಶ್ರೀ ಸಾಲಿಸಿದ್ಧಯ್ಯ, ಡಾ. ಜಿ.ಎಂ. ವಿನಯ್‌ರವರುಗಳಿದ್ದಾರೆ

ಸಿರಿಧಾನ್ಯ ಗ್ಲೂಟನ್ ಮುಕ್ತ ಆಹಾರ ಎಂದು ಕೇಂದ್ರದ ಕೃಷಿ ಮತ್ತು ರೈತ ಕಲ್ಯಾಣ ಖಾತೆ ರಾಜ್ಯ ಸಚಿವರಾದ ಕು. ಶೋಭಾ ಕರಂದ್ಲಾಜೆಯವರು ಹೇಳಿದರು.

ಜಾತ್ರಾ ಮಹೋತ್ಸವದಲ್ಲಿ ದಿನಾಂಕ 21.1.2023ರಂದು ನಡೆದ ಸಿರಿಧಾನ್ಯ ಮಹತ್ವ ಕುರಿತ ಕೃಷಿ ವಿಚಾರಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು ಗ್ಲೂಟನ್ ಮುಕ್ತವಾಗಿರುವ ಸಿರಿಧಾನ್ಯಗಳನ್ನು ನಾವು ಬಳಸಿ, ವಿದೇಶಗಳಿಗೂ ರಫ್ತು ಮಾಡುವಂತಾಗಬೇಕು. ಸಿರಿಧಾನ್ಯಗಳಿಗೆ ಅಂತಾರಾಷ್ಟ್ರೀಯ ಮಾರುಕಟ್ಟೆ ಸೃಷ್ಟಿಸಿಕೊಳ್ಳಬೇಕಿದೆ ಎಂದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹ ಸರಕಾರ್ಯವಾಹರಾದ ಶ್ರೀ ಸಿ.ಆರ್. ಮುಕುಂದ್‌ರವರು ಸಿರಿಧಾನ್ಯಗಳು ಆಹಾರ ಮಾತ್ರವಲ್ಲದೇ, ಔಷಧ ರೂಪದಲ್ಲೂ ಕೆಲಸ ಮಾಡುತ್ತವೆ. ಹೆಚ್ಚಿನ ಪೌಷ್ಟಿಕಾಂಶವನ್ನು ಹೊಂದಿರುವ ಸಿರಿಧಾನ್ಯಗಳು ಅಪೌಷ್ಟಿಕತೆಯನ್ನು ನಿವಾರಿಸುತ್ತವೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಸಿರಿಧಾನ್ಯ ಐಸಿರಿ ಕೃತಿ ಬಿಡುಗಡೆಗೊಳಿಸಲಾಯಿತು. ಶ್ರೀ ಆದಿಜಾಂಬವ ಕೋಡಿಹಳ್ಳಿ ಬೃಹನ್ಮಠದ ಶ್ರೀ ಷಡಕ್ಷರಿಮುನಿ ದೇಶಿಕೇಂದ್ರ ಸ್ವಾಮಿಗಳು ಸಮ್ಮುಖ ವಹಿಸಿದ್ದರು. ವಿಧಾನಪರಿಷತ್ ಸಭಾಪತಿಗಳಾದ ಶ್ರೀ ಬಸವರಾಜ ಎಸ್. ಹೊರಟ್ಟಿ ಪ್ರಗತಿಪರ ರೈತರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಪಬ್ಲಿಕ್ ಟಿವಿ ಮುಖ್ಯಸ್ಥರಾದ ಶ್ರೀ ಹೆಚ್.ಆರ್. ರಂಗನಾಥ್, ಶ್ರೀಮತಿ ಸರಿತಾ ಪುರುಷೋತ್ತಮ್, ಡಾ. ವಿ. ವೆಂಕಟಸುಬ್ರಮಣಿಯನ್, ಡಾ. ವಿ. ಹೇಮಲಾ ನಾಯಕ್ ಮಾತನಾಡಿದರು. ಪ್ರೊ. ರವಿ ಕೋರಿಶೆಟ್ಟರ್, ಶ್ರೀ ಹೊನ್ನೂರು ಪ್ರಕಾಶ್, ಶ್ರೀ ಎಂ.ಎನ್. ದಿನೇಶ ಕುಮಾರ್ ಉಪನ್ಯಾಸ ನೀಡಿದರು. ಸಂಗೀತ ವಿವಿ ಕುಲಪತಿಗಳಾದ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ, ವಿಶ್ರಾಂತ ಕುಲಪತಿಗಳಾದ ಪ್ರೊ. ಜಿ. ಹೇಮಂತಕುಮಾರ್ ಉಪಸ್ಥಿತರಿದ್ದರು.

## ಜೀವನದಲ್ಲಿ ಒಮ್ಮೆ ಸುತ್ತೂರು ಜಾತ್ರೆ ನೋಡಿ



ಜಾತ್ರಾ ಮಹೋತ್ಸವದಲ್ಲಿ ಕೃಷಿ ಮೇಳ ಮತ್ತು ವಸ್ತುಪ್ರದರ್ಶನದ ಸಮಾರೋಪ ಕಾರ್ಯಕ್ರಮ. ಶ್ರೀ ರಾಜೇಶ್ ಬಿ. ಚಂದರ್, ಶ್ರೀ ಎ.ಎಚ್. ವಿಶ್ವನಾಥ್, ಶ್ರೀ ಎನ್. ಮುನಿರತ್ನ, ಕೊಪ್ಪಳದ ಜಗದ್ಗುರು ಶ್ರೀ ಅಭಿನವ ಗವಿಸಿದ್ಧೇಶ್ವರ ಮಹಾಸ್ವಾಮಿಗಳು, ಚಿಕ್ಕೇನಕೊಪ್ಪದ ಶ್ರೀ ಶಿವಶಾಂತವೀರ ಶರಣರು, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಡಿ.ವಿ. ಸದಾನಂದಗೌಡ ಮತ್ತು ಶ್ರೀಮತಿ ಡಾಟಿ ಸದಾನಂದಗೌಡರವರುಗಳಿದ್ದಾರೆ (23 ಜನವರಿ 2023)

ಜೀವನದಲ್ಲಿ ಒಮ್ಮೆ ಸುತ್ತೂರು ಜಾತ್ರೆ ನೋಡಿ ಎಂದು ಕೊಪ್ಪಳ ಶ್ರೀ ಗವಿಸಿದ್ಧೇಶ್ವರ ಮಠದ ಜಗದ್ಗುರು ಶ್ರೀ ಅಭಿನವ ಗವಿಸಿದ್ಧೇಶ್ವರ ಮಹಾಸ್ವಾಮಿಗಳು ಹೇಳಿದರು.

ಜಾತ್ರಾ ಮಹೋತ್ಸವದಲ್ಲಿ ದಿನಾಂಕ 23.1.2023ರಂದು ನಡೆದ ಕೃಷಿ ಮೇಳ ಮತ್ತು ವಸ್ತುಪ್ರದರ್ಶನ ಸಮಾರೋಪದ ಸಮ್ಮುಖ ವಹಿಸಿ ಮಾತನಾಡಿದ ಅವರು ಅಚ್ಚುಕಟ್ಟುತನ, ಶಿಸ್ತು ಸುತ್ತೂರು ಜಾತ್ರೆಯ ವೈಭವಕ್ಕೆ ಮೆರಗು ತಂದಿವೆ. ಆರು ದಿನಗಳ ಕಾಲ ಅನುಭಾವಿಗಳು ಮಾತನಾಡಿದ್ದಾರೆ. ಆ ಎಲ್ಲ ಮಾತುಗಳಲ್ಲಿ ಶರಣರ, ಹಿರಿಯರ ಒಂದು ಮಾತನ್ನು ನೆನಪಿಟ್ಟುಕೊಂಡರೆ ಜೀವನ ಸಾರ್ಥಕ. ದಾರ್ಶನಿಕರು ಮನುಷ್ಯನ ಬದುಕಿನ ಬಾಳ ಸತ್ಯವನ್ನು ತೋರಿಸಿಕೊಟ್ಟರು. ಮೇಲ್ನೋಟಕ್ಕೆ ಮನುಷ್ಯನ ಬದುಕು ಸುಖದಂತೆ ತೋರಿದರೂ, ಪರಿಣಾಮದಲ್ಲಿ ಅದು ದುಃಖದಿಂದ ಕೂಡಿದೆ. ಇಂತಹ ಅದ್ಭುತ ಜಾತ್ರೆಯ ಮೂಲಕ ಎಲ್ಲರನ್ನೂ ಸುಖ ಮತ್ತು ಸನ್ಮಾರ್ಗಕ್ಕೆ ಕೊಂಡೊಯ್ಯುವ ಕೆಲಸವನ್ನು ಮಾಡಲಾಗುತ್ತಿದೆ. ಪೂಜ್ಯರ ದೂರದೃಷ್ಟಿ ದಿವ್ಯವಾದುದು. ಸಮಚಿತ್ತ, ಸಮಭಾವ, ಸಮರತಿಯುಳ್ಳ ಪೂಜ್ಯರು ನಿಜವಾದ ಸಂತರು ಎಂದು ಹೇಳಿದರು.

ಚಿಕ್ಕೇನಕೊಪ್ಪದ ಶ್ರೀ ಶಿವಶಾಂತವೀರ ಶರಣರು, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಡಿ.ವಿ. ಸದಾನಂದಗೌಡ, ಸಚಿವರಾದ ಶ್ರೀ ಎನ್. ಮುನಿರತ್ನ, ಶಾಸಕರಾದ ಶ್ರೀ ಎ.ಹೆಚ್. ವಿಶ್ವನಾಥ್ ಮಾತನಾಡಿದರು. ಶ್ರೀ ರಾಜೇಶ್ ಬಿ. ಚಂದರ್, ಶ್ರೀ ಕೆ.ಸಿ. ಶಿವಪ್ಪ, ಶ್ರೀ ಚೇತನ್ ರಾಮ್, ಶ್ರೀಮತಿ ಡಾಟಿ ಸದಾನಂದಗೌಡ ಮೊದಲಾದವರುಗಳು ಉಪಸ್ಥಿತರಿದ್ದರು.

ನಿಜವನರಿದ ನಿಶ್ಚಿಂತನೆ, ಮರಣವ ಗೆಲಿದ ಮಹಂತನೆ

ಘನವ ಕಂಡ ಮಹಿಮನೆ, ಪರವನೊಳಕೊಂಡ ಪರಿಣಾಮಿಯೆ

ಬಯಲಲೊದಗಿದ ಭರಿತನೆ

ಗುಹೇಶ್ವರಲಿಂಗ ನಿರಾಳವನೊಳಕೊಂಡ ಸಹಜನೆ

**ಅಲ್ಲಮಪ್ರಭು**

## ಸಂಸ್ಕೃತಿಯ ಪ್ರತೀಕ ಸುತ್ತೂರು ಶ್ರೀಮಠ



ಜಾತ್ರಾ ಮಹೋತ್ಸವದ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ ಭಜನಾ ಮೇಳದ ಸಮಾರೋಪದಲ್ಲಿ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಎಸ್. ಬೊಮ್ಮಾಯಿಯವರು ಮಾತನಾಡುತ್ತಿರುವುದು. ಶ್ರೀ ಬಿ.ಸಿ. ನಾಗೇಶ್, ಡಾ. ಕೆ. ಸುಧಾಕರ್, ಶ್ರೀ ಆರ್. ಅಶೋಕ, ಶ್ರೀ ಬಿ.ಎಲ್. ಸಂತೋಷ್, ಮೌನತಪಸ್ವಿ ಶ್ರೀ ಜಡೆ ಶಾಂತಲಿಂಗ ಮಹಾಸ್ವಾಮಿಗಳು, ಆರತಿಪುರದ ಜೈನಮಠ ಮತ್ತು ಶ್ರೀ ಗೋಸಾಯಿ ಮಠದ ಶ್ರೀಗಳು ಮೊದಲಾದವರಿದ್ದಾರೆ

ಶ್ರೀ ಸುತ್ತೂರು ಮಠ ಧರ್ಮಾಚರಣೆ ಮತ್ತು ಸಂಸ್ಕೃತಿಯ ಪ್ರತೀಕ ಎಂದು ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಎಸ್. ಬೊಮ್ಮಾಯಿಯವರು ಹೇಳಿದರು.

ಜಾತ್ರಾ ಮಹೋತ್ಸವದಲ್ಲಿ ದಿನಾಂಕ 22.1.2023ರಂದು ನಡೆದ ಭಜನಾ ಮೇಳ ಸಮಾರೋಪದಲ್ಲಿ ಮಾತನಾಡಿದ ಅವರು ಮಠಗಳು ತ್ರಿವಿಧ ದಾಸೋಹದ ಮೂಲಕ ಜಾತಿ, ಮತಗಳ ಭೇದ ಭಾವವನ್ನು ಹೋಗಲಾಡಿಸುತ್ತಿವೆ. ಧರ್ಮಾಚರಣೆಯ ಜತೆಗೆ ಜನರ ಜೀವನ ಬೆರೆತಾಗ ಸುಸಂಸ್ಕೃತ ಸಮಾಜ ನಿರ್ಮಾಣವಾಗುತ್ತದೆ ಎಂದು ಹೇಳಿದರು.

ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಿ.ಎಲ್. ಸಂತೋಷ್‌ರವರು ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಭಾರತದಲ್ಲಿ ಸುಧಾರಣೆಗಳು ನಿರಂತರವಾಗಿ ನಡೆದುಕೊಂಡು ಬಂದಿವೆ. ಸುಧಾರಣೆ ಮತ್ತು ಬದಲಾವಣೆ ಮಾಡುತ್ತೇವೆಂದು ಅನಾರೋಗ್ಯಕರವಾಗಿ ನಡೆದುಕೊಳ್ಳದೆ, ಆರೋಗ್ಯಕರವಾದ ರೀತಿಯಲ್ಲಿ ಬದುಕಬೇಕು ಎಂದರು.

ಮೌನತಪಸ್ವಿ ಶ್ರೀ ಜಡೆ ಶಾಂತಲಿಂಗ ಮಹಾಸ್ವಾಮಿಗಳು, ಶ್ರೀ ಭವಾನಿ ಪೀಠದ ಜಗದ್ಗುರು ಶ್ರೀ ಮಂಜುನಾಥ್ ಮಹಾಸ್ವಾಮಿಗಳು, ಆರತಿಪುರ ಜೈನಮಠದ ಸ್ವಸ್ತಿಶ್ರೀ ಸಿದ್ಧಾಂತಕೀರ್ತಿ ಭಟ್ಟಾರಕ ಸ್ವಾಮಿಗಳು ಸಮ್ಮುಖ ವಹಿಸಿದ್ದರು. ಸಚಿವರಾದ ಶ್ರೀ ವಿ. ಸೋಮಣ್ಣ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಆರ್. ಅಶೋಕ, ಡಾ. ಕೆ. ಸುಧಾಕರ್, ಶ್ರೀ ಬಿ.ಸಿ. ನಾಗೇಶ್, ಶಾಸಕರುಗಳಾದ ಶ್ರೀ ತನ್ವೀರ್ ಸೇಠ್, ಶ್ರೀ ಸಿ.ಎಸ್. ನಿರಂಜನಕುಮಾರ್, ಶ್ರೀ ಎಲ್. ನಾಗೇಂದ್ರ, ಶ್ರೀ ಎಂ. ಅಶ್ವಿನ್‌ಕುಮಾರ್, ಶ್ರೀ ಬಿ ಹರ್ಷವರ್ಧನ್, ಮಹಾಪೌರರಾದ ಶ್ರೀ ಶಿವಕುಮಾರ್, ಅಮೆರಿಕದ ಶ್ರೀ ಸ್ವಪನ್ ಸರ್ಕಾರ್ ಮೊದಲಾದವರುಗಳು ಉಪಸ್ಥಿತರಿದ್ದರು.

## ರೈತರು ಸಂಶೋಧಕರಾಗಬೇಕು




ಜಾತ್ರಾ ಮಹೋತ್ಸವದಲ್ಲಿ ಕೃಷಿ ವಿಚಾರಸಂಕಿರಣದ ಸಮಾರೋಪದಲ್ಲಿ ಕೇಂದ್ರದ ರಾಜ್ಯ ಸಚಿವರಾದ ಶ್ರೀ ಭಗವಂತ ಖೂಬಾರವರು ಮಾತನಾಡುತ್ತಿರುವುದು. ಡಾ. ಬಿ.ಸಿ. ಸಂಗಪ್ಪ, ಶ್ರೀ ಮಹೇಶ್ ಬಸವಣ್ಣ (ತೆಂಕಹಳ್ಳಿ), ಡಾ. ಅಶೋಕ್ ಆಲೂರ್, ಶ್ರೀ ರವೀಂದ್ರ ಭಟ್ಟ, ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮಿಗಳು, ಶ್ರೀ ಸೌಮ್ಯನಾಥ ಸ್ವಾಮಿಗಳು, ಡಾ. ಶರಣಪ್ಪ ವಿ. ಹಲ್ಸೆ, ಶ್ರೀಮತಿ ನಿರ್ಮಲಾ ವೆಂಕಟೇಶ್‌ರವರಿದ್ದಾರೆ

ರೈತನು ಸಂಶೋಧಕನಾಗಿ, ವ್ಯಾಪಾರಿಯಾಗಿ ಬದಲಾದರೆ ಕೃಷಿಯಲ್ಲಿ ಯಶಸ್ಸು ಶತಸಿದ್ಧ ಎಂದು ಕೇಂದ್ರದ ರಾಸಾಯನಿಕ, ರಸಗೊಬ್ಬರ, ಹೊಸ ಮತ್ತು ನವೀಕರಿಸಬಹುದಾದ ಇಂಧನ ರಾಜ್ಯ ಸಚಿವರಾದ ಶ್ರೀ ಭಗವಂತ ಖೂಬಾರವರು ಹೇಳಿದರು.

ಜಾತ್ರಾ ಮಹೋತ್ಸವದಲ್ಲಿ ದಿನಾಂಕ 21.1.2023ರಂದು ನಡೆದ ಕೃಷಿ ವಿಚಾರಸಂಕಿರಣ ಸಮಾರೋಪದಲ್ಲಿ ಮಾತನಾಡಿದ ಅವರು ಭಾರತದಲ್ಲಿ ಕೃಷಿಗೆ ಬೇಕಾದ ಎಲ್ಲಾ ಮೂಲ ಸೌಲಭ್ಯಗಳು ಹೇರಳವಾಗಿವೆ. ಅದನ್ನು ಬಳಸಿಕೊಂಡು ಯಶಸ್ಸು ಗಳಿಸಲು ಕೃಷಿಕ ಬದಲಾಗಲೇಬೇಕು ಎಂದರು.

ಪ್ರಜಾವಾಣಿ ಕಾರ್ಯನಿರ್ವಾಹಕ ಸಂಪಾದಕರಾದ ಶ್ರೀ ರವೀಂದ್ರ ಭಟ್ಟರವರು ಮಾತನಾಡಿ ನಮ್ಮ ಪಠ್ಯಪುಸ್ತಕಗಳು ಹೇಳಲಾಗದ ಪಾಠ ಇಲ್ಲಿ ದೊರೆಯುತ್ತದೆ. ವಿದ್ಯಾರ್ಥಿಗಳನ್ನು ಸುತ್ತೂರು ಜಾತ್ರೆಗೆ ಕರೆತರುವ ಕೆಲಸವಾಗಬೇಕು ಎಂದರು.

ಚಿತ್ರದುರ್ಗದ ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮಿಗಳು, ಆದಿಚುಂಚನಗಿರಿ ಬೆಂಗಳೂರು ಶಾಖಾಮಠದ ಶ್ರೀ ಸೌಮ್ಯನಾಥ ಸ್ವಾಮಿಗಳು ಸಮ್ಮುಖ ವಹಿಸಿದ್ದರು. ಡಾ. ಬಿ.ಸಿ. ಸಂಗಪ್ಪ, ಡಾ. ಅಶೋಕ್ ಆಲೂರ್, ಶ್ರೀ ಮಹೇಶ್ ಬಸವಣ್ಣ ಉಪನ್ಯಾಸ ನೀಡಿದರು.

## ಯಂತ್ರಮಾನವರಾಗಬಾರದು

ಯುವಕರು ಯಂತ್ರ ಮಾನವರಾಗದೇ ಸಂಸ್ಕೃತಿಯ ಜೀವಸೆಲೆ ತೋರುವ ಮನುಷ್ಯರಾಗಬೇಕು ಎಂದು ಶಾಸಕರು ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಶ್ರೀ ಈಶ್ವರ ಬಿ. ಖಂಡ್ರೆಯವರು ಹೇಳಿದರು.

ಜಾತ್ರಾ ಮಹೋತ್ಸವದಲ್ಲಿ ದಿನಾಂಕ 22.1.2023ರಂದು ನಡೆದ ದೇಸಿ ಆಟಗಳು ಹಾಗೂ ಸಾಂಸ್ಕೃತಿಕ ಮೇಳದ ಸಮಾರೋಪದಲ್ಲಿ ಮಾತನಾಡಿದ ಅವರು ಇಂದಿನ ಆಧುನಿಕ ತಂತ್ರಜ್ಞಾನದ ವಿಪರೀತ ಬಳಕೆಯಿಂದಾಗಿ ನಮ್ಮ ದೇಸಿ ಆಟಗಳು, ಸಂಸ್ಕೃತಿಗಳು ಕ್ಷೀಣಿಸುತ್ತಿವೆ. ಯುವಕರು ಆನ್‌ಲೈನ್ ವ್ಯಸನದಿಂದ ಹೊರಬರಬೇಕು ಎಂದರು.

ಕೂಡಲಸಂಗಮದ ಡಾ. ಮಾತೆ ಗಂಗಾದೇವಿಯವರು ಸಮ್ಮುಖ ವಹಿಸಿದ್ದರು. ಕೆಪಿಸಿಸಿ ಕಾರ್ಯಾಧ್ಯಕ್ಷರಾದ ಶ್ರೀ ಆರ್. ಧ್ರುವನಾರಾಯಣ, ವಿಸ್ತಾರ ನ್ಯೂಸ್‌ನ ಪ್ರಧಾನ ಸಂಪಾದಕರಾದ ಶ್ರೀ ಹರಿಪ್ರಕಾಶ್ ಕೋಣೆಮನೆ, ಶಾಸಕರಾದ ಶ್ರೀ ಅನಿಲ್‌ಕುಮಾರ್ ಚಿಕ್ಕಮಾದು, ಅಮೆರಿಕದ ಶ್ರೀಮತಿ ಭಾರತೀ ಅನಿಲ್ ಪಾಟೀಲ್ ಮೊದಲಾದವರು ಇದ್ದರು.

## ಜೆಎಸ್‌ಎಸ್ ಮಹಾವಿದ್ಯಾಪೀಠದ ಸೇವೆ ಬಹುದೊಡ್ಡ ವರದಾನ

ಸ್ವಾತಂತ್ರ್ಯಾನಂತರ ಎಲ್ಲ ಕ್ಷೇತ್ರಗಳಲ್ಲೂ ದೇಶ ಸಂಕಷ್ಟದ ಸ್ಥಿತಿಯಲ್ಲಿತ್ತು. ಅಂತಹ ಸಂದರ್ಭದಲ್ಲಿ ರಾಜೇಂದ್ರ ಶ್ರೀಗಳು ಸ್ಥಾಪಿಸಿದ ಜೆಎಸ್‌ಎಸ್ ಮಹಾವಿದ್ಯಾಪೀಠದ ಅಗತ್ಯತೆ ಬಹುದೊಡ್ಡ ವರದಾನವಾಗಿ ಪರಿಣಮಿಸಿತು ಎಂದು ತಮಿಳುನಾಡು ರಾಜ್ಯಪಾಲರಾದ ಶ್ರೀ ಆರ್.ಎನ್. ರವಿಯವರು ಹೇಳಿದರು.

**ಜೆಎಸ್‌ಎಸ್ ಆಸ್ಪತ್ರೆಯ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ** ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ದಿನಾಂಕ 4.2.2023ರಂದು ಆಯೋಜಿಸಿದ್ದ ಸುವರ್ಣ ಮಹೋತ್ಸವ 12ನೇ ದತ್ತಿ ಉಪನ್ಯಾಸದಲ್ಲಿ 'ಜಿ–20 ನಾಯಕತ್ವ : ಭಾರತದ ಅವಕಾಶಗಳು' ಕುರಿತು ಉಪನ್ಯಾಸ ನೀಡಿದ ಅವರು ಅಂದು ಭಾರತ ಆರ್ಥಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕವಾಗಿ ಸಮಸ್ಯೆಗಳನ್ನು ಎದುರಿಸುತ್ತಿತ್ತು. ರಾಜೇಂದ್ರ ಶ್ರೀಗಳ ದೂರದೃಷ್ಟಿಯಿಂದ ಸ್ಥಾಪನೆಯಾದ ವಿದ್ಯಾಪೀಠ ಇಂದು ವಿಶ್ವದಾದ್ಯಂತ 350ಕ್ಕೂ ಹೆಚ್ಚು ಸಂಸ್ಥೆಗಳನ್ನು ಹೊಂದಿ ಸಮಾಜಕ್ಕೆ ಉತ್ತಮ ಸೇವೆಯನ್ನು ನೀಡುತ್ತಿದೆ. ಇಂದು ಭಾರತವನ್ನು ಜಗತ್ತೇ ತಿರುಗಿ ನೋಡುತ್ತಿದೆ. ಭಾರತದ ಮಾತುಗಳನ್ನು ಜಗತ್ತು ಒಪ್ಪಿಕೊಳ್ಳುತ್ತಿದೆ. ಅದಕ್ಕೆ ಕಾರಣ ದೇಶ ಸಮರ್ಥ ನಾಯಕತ್ವವನ್ನು ಹೊಂದಿರುವುದು. ಭಾರತ ಕೇವಲ ಯಾವುದೋ ಒಂದು ರಾಜನಿಂದ ಸೃಷ್ಟಿಯಾದುದಲ್ಲ. ಅದು ನಮ್ಮ ಪ್ರಾಚೀನ ಋಷಿಮುನಿಗಳು, ಸಂತರಿಂದ ನಿರ್ಮಿಸಲ್ಪಟ್ಟಿದೆ. ಭಾರತ ಮಾನವೀಯತೆಯಲ್ಲಿ ನಂಬಿಕೆಯಿಟ್ಟಿರುವ ರಾಷ್ಟ್ರ. ಹೀಗಾಗಿಯೇ ಅದು ರಷ್ಯಾ ಮತ್ತು ಉಕ್ರೇನ್ ರಾಷ್ಟ್ರಗಳಿಗೆ ಯುದ್ಧ ಬೇಡ ಎಂಬ ಸಂದೇಶವನ್ನು ನೀಡಿತು. ಭಾರತ ಎಂದೂ ಹಿಂಸೆಯನ್ನು ಒಪ್ಪುವುದಿಲ್ಲ. ಅತಿಯಾದ ಹೈಡ್ರೋಕಾರ್ಬನ್ ಉತ್ಪಾದನೆಯಿಂದ ಇಂದು ಭೂಮಿಯ ತಾಪ ಹೆಚ್ಚುತ್ತಿದೆ, ನದಿಗಳು ಒಣಗುತ್ತಿವೆ, ಕಾಡು ಕಾಣದಂತಾಗುತ್ತಿದೆ. ಅತಿಯಾದ ರಸಗೊಬ್ಬರಗಳ ಬಳಕೆಯಿಂದ ಮಣ್ಣು ಸತ್ವವನ್ನು ಕಳೆದುಕೊಳ್ಳುತ್ತಿದೆ. ಈ ಸಮಸ್ಯೆಗಳನ್ನು ಹೇಗೆ ಎದುರಿಸಬೇಕು ಎಂಬುದನ್ನು ಯೋಚಿಸಬೇಕಿದೆ. ಹಸಿರು ಇಂಧನದ ಬಳಕೆಯನ್ನು ಹೆಚ್ಚಿಸಬೇಕು. ಅದು ಭಾರತದಲ್ಲಿ ಕೂಡ ಇಂದು ಹೆಚ್ಚುತ್ತಿದೆ, ನಮ್ಮ ವಿಜ್ಞಾನಿಗಳಿಗೆ ನಾವು ಧನ್ಯವಾದಗಳನ್ನು ಹೇಳಲೇಬೇಕು. ಕೋವಿಡ್ 19ನ್ನು ತಡೆಗಟ್ಟಲು ಅವರು ಕಂಡುಹಿಡಿದ ಲಸಿಕೆಯನ್ನು ದೇಶದಲ್ಲಿ ಬಳಸಿಕೊಂಡು, 120ಕ್ಕೂ ಹೆಚ್ಚು ರಾಷ್ಟ್ರಗಳಿಗೆ ಉಚಿತವಾಗಿ ನೀಡಲಾಗಿದೆ. ಇದು ಭಾರತದ ಸಹಾಯಹಸ್ತ ಚಾಚುವ ಮಾನವೀಯ ಗುಣ. ಭಾರತ ಜಿ–20 ಅಧ್ಯಕ್ಷತೆಯನ್ನು ವಹಿಸಿರುವುದು ದೇಶಕ್ಕೆ ಎಷ್ಟು ಮುಖ್ಯವೋ, ಜಗತ್ತಿಗೂ ಅಷ್ಟೇ ಮುಖ್ಯವಾಗಿದೆ. ಜಗತ್ತೇ ಒಂದು ಕುಟುಂಬ ಎನ್ನುವ ವಸುದೈವ ಕುಟುಂಬಕಂ ಪರಿಕಲ್ಪನೆಯೊಂದಿಗೆ ಕೆಲಸ ಮಾಡಲಾಗುತ್ತಿದೆ. ಇದು ಭಾರತೀಯರಿಗೆ ವಂಶವಾಹಿಯಲ್ಲೇ ಬಂದಿರುವಂತಹುದು. ಸ್ವಾಮಿ ವಿವೇಕಾನಂದರ ಪರಿಕಲ್ಪನೆಯ ಭಾರತವನ್ನು ಕಟ್ಟಬೇಕಿದೆ ಎಂದು ಹೇಳಿದರು.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಜೆಎಸ್‌ಎಸ್ ಮಹಾವಿದ್ಯಾಪೀಠವನ್ನು ನಿರ್ಗತಿಕರಿಗೆ ಸಹಾಯವಾಗಲೆಂದು ಸಮಾಜೋದ್ಧಾರಕ್ಕಾಗಿ ರಾಜೇಂದ್ರ ಶ್ರೀಗಳು ಸ್ಥಾಪಿಸಿದರು. ಅವರು ಕೊನೆಯವರೆಗೂ ಬಸವೇಶ್ವರರು ಹೇಳಿದಂತೆ ಇವನಾರವನೆನ್ನದೆ ಇವ ನಮ್ಮವ ಎಂಬ ಮಾತಿಗೆ ಅನುಗುಣವಾಗಿ ಬಾಳಿದರು. ಸಹಾಯ ಕೋರಿ ಬಂದವರನ್ನು ಎಂದಿಗೂ ಬರಿಗೈಯಲ್ಲಿ ಕಳುಹಿಸಲಿಲ್ಲ. ಅವರ ಆಲೋಚನೆಗಳು, ದಯೆ, ಉಪಕಾರ ಬಹಳ ದೊಡ್ಡವು. ಅವರ ಆದರ್ಶಗಳ ಆಧಾರದ ಮೇಲೆ ಇಂದು ಮಹಾವಿದ್ಯಾಪೀಠ ಕಾರ್ಯನಿರ್ವಹಿಸುತ್ತಿದೆ. ಇಂದು ಬೆಳೆಯುತ್ತಿರುವ ಭಾರತಕ್ಕೆ ಜಿ–20 ನಾಯಕತ್ವ ಹೊಸದೊಂದು ಆಯಾಮವನ್ನು ತಂದುಕೊಟ್ಟಿದೆ. ಭಾರತದ ನೀತಿಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಭಾವವನ್ನು ಬೀರಲಿವೆ. ಸಮಾಜದ ಪ್ರತಿಯೊಂದು ಕ್ಷೇತ್ರದಲ್ಲೂ ಭಾರತ ತನ್ನ ಶಕ್ತಿಯನ್ನು ಪ್ರದರ್ಶಿಸಲು ನೆರವಾಗಲಿದೆ ಎಂದು ತಿಳಿಸಿದರು.

ಜೆಎಸ್‌ಎಸ್ ಲಲಿತಕಲಾ ವೃಂದದವರು ಪ್ರಾರ್ಥಿಸಿದರು. ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ ಸ್ವಾಗತಿಸಿದರು. ಪ್ರೊ. ಮೊರಬದ ಮಲ್ಲಿಕಾರ್ಜುನ ವಂದಿಸಿದರು. ಶ್ರೀ ಆರ್. ಮಹೇಶ್ ಕಾರ್ಯಕ್ರಮ ನಿರೂಪಿಸಿದರು.

## ಇತಿಹಾಸದ ನಿರ್ಮಾಣದಲ್ಲಿ ಶಾಸನಗಳ ಪಾತ್ರ ಮಹತ್ವದ್ದು




ಶಾಸನಗಳೆಂದರೆ ಬರಹಗಳನ್ನು ಓದುವ ಶಾಸ್ತ್ರ. ಈಜಿಪ್ಟ್, ಭಾರತ, ಚೀನಾ ಇವೇ ಮೊದಲಾದ ದೇಶಗಳಲ್ಲಿ ಚಾರಿತ್ರಿಕ ಸಾಮಗ್ರಿಗಳು ಹೆಚ್ಚಾಗಿ ದೊರೆತಿವೆ. ಅವುಗಳಲ್ಲಿ ನಾಣ್ಯಗಳು, ಶಿಲ್ಪ, ತಾಮ್ರಪಟಗಳು ಮೊದಲಾದವುಗಳು. ಮೌಖಿಕ ಇತಿಹಾಸದಲ್ಲಿ ಘಟನೆಗಳಷ್ಟೇ ಇರುತ್ತವೆ. ಕಾಲದ ನಿಖರತೆಯನ್ನು ಅವು ತಿಳಿಸುವುದಿಲ್ಲ. ಶಾಸನಗಳು ನಂಬಲರ್ಹವಾದ ವಿಚಾರಗಳನ್ನಷ್ಟೇ ನೀಡುತ್ತವೆ. ಆದ್ದರಿಂದ ಇತಿಹಾಸ ನಿರ್ಮಾಣದಲ್ಲಿ ಶಾಸನಗಳ ಪಾತ್ರ ಮಹತ್ವದ್ದು ಎಂದು ಪ್ರೊ. ಎನ್.ಎಸ್. ತಾರಾನಾಥ್‌ರವರು ಅಭಿಪ್ರಾಯಿಸಿದರು.

**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ** ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ಪ್ರಚಾರೋಪನ್ಯಾಸ ಮಾಲೆಯ ಭಾಗವಾಗಿ ದಿನಾಂಕ 16.1.2023ರಂದು ಏರ್ಪಡಿಸಲಾಗಿದ್ದ ಶಾಸನಗಳ ಮಹತ್ವವನ್ನು ಕುರಿತಾದ ವಿಶೇಷೋಪನ್ಯಾಸದಲ್ಲಿ ಅವರು ಮಾತನಾಡುತ್ತಾ ಇತಿಹಾಸದಲ್ಲಿ ಉತ್ಪ್ರೇಕ್ಷೆಯ ಅಂಶಗಳು ಇರುವ ಸಾಧ್ಯತೆಗಳಿವೆ. ಅದೇ ಶಾಸನಗಳಲ್ಲಿ ಉತ್ಪ್ರೇಕ್ಷೆಯ ಅಂಶಗಳು ಕಂಡುಬರುವುದಿಲ್ಲ. ಸಾಕ್ಷಾತ್ತಾದ, ಪ್ರತ್ಯಕ್ಷವಾದ ಕುರುಹುಗಳೇ ಇರುತ್ತವೆ. ಶಾಸನಗಳನ್ನು ಬರೆಸಲು ಅಧಿಕೃತ ಒಪ್ಪಿಗೆ ಇರಬೇಕು. ಒಂದು ರೀತಿಯಲ್ಲಿ ಶಾಸನಗಳು ಸಾರ್ವಜನಿಕ ಪ್ರಕಟಣೆ. ಆದ್ದರಿಂದಲೇ ಭಾರತದ ಚರಿತ್ರೆಯ ರಚನೆಯಲ್ಲಿ ಶಾಸನಗಳ ಪಾತ್ರ ವಿಶೇಷವಾದದ್ದು. ಶಾಸನಗಳು ದೊರೆಯದೇ ಇದ್ದಿದ್ದರೆ ಇಂದು ನಮಗೆ ಅನೇಕ ಮಹತ್ವದ ವಿಚಾರಗಳೆ ದೊರೆಯುತ್ತಿರಲಿಲ್ಲ. ಶಾಸನಗಳು ತತ್ಕಾಲೀನ ಸಮಾಜದ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ, ಧಾರ್ಮಿಕ ವಿಚಾರಗಳನ್ನು ತಿಳಿಸುವಲ್ಲಿ ಸಹಕಾರಿಯಾಗಿವೆ. ನಾಣ್ಯಗಳು, ಶಿಲ್ಪ, ತಾಮ್ರಪಟ ಮುಂತಾದವುಗಳಲ್ಲಿ ಶಾಸನಗಳ ರಚನೆಯಾಗಿವೆ. ಈ ನೆಲದ ಸಾಂಸ್ಕೃತಿಕ ಚರಿತ್ರೆಯನ್ನು ಅರಿಯಲು ಕೊಪ್ಪಳದ ಶಾಸನ, ಹಲ್ಮಿಡಿ ಶಾಸನ, ಬಾದಾಮಿ ಶಾಸನ, ತಾಳಗುಂದ ಶಾಸನ, ಕುರ್ಕ್ಯಾಲ ಶಾಸನ ಇವೇ ಮೊದಲಾದ ಶಾಸನಗಳನ್ನು ಓದಿ ತಿಳಿದುಕೊಳ್ಳಬೇಕು ಎಂದರು.

ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ನಂಜಯ್ಯ ಹೊಂಗನೂರು ಅವರು ಪ್ರಾಸ್ತಾವಿಕ ನುಡಿಗಳನ್ನಾಡಿ ಜೆಎಸ್‌ಎಸ್ ಸಂಸ್ಥೆಯ ಬಗ್ಗೆ ನನಗೆ ವಿಶೇಷವಾದ ಗೌರವವಿದೆ. ಪ್ರಸಾರಾಂಗಕ್ಕೆ 90 ವರ್ಷಗಳಾಗಿವೆ. ಇದುವರೆವಿಗೂ ನಿಘಂಟು ಯೋಜನೆ, ಪಠ್ಯಪುಸ್ತಕ ಯೋಜನೆ, ದತ್ತಿ ಉಪನ್ಯಾಸ ಯೋಜನೆ ಇತ್ಯಾದಿ ಅನೇಕ ಯೋಜನೆಗಳನ್ನು ಹಳ್ಳಿಯ ಕಾಲೇಜುಗಳಿಗೂ ತಲುಪುವಂತೆ ಹಮ್ಮಿಕೊಂಡು

ನಿರ್ವಹಿಸುತ್ತಾ ಬಂದಿದೆ. ಪ್ರಚಾರೋಪನ್ಯಾಸ ಮಾಲೆಯ ಕೊನೆಯ ಕಂತು ಈ ಕಾಲೇಜಿನಲ್ಲಿ ನಡೆಯುತ್ತಿರುವುದು ತುಂಬಾ ಸಂತೋಷದ ವಿಷಯ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಪ್ರೊ. ಎನ್.ಎಸ್. ತಾರಾನಾಥ್ ಅವರ ಮಾತುಗಳನ್ನು ಕೇಳುವುದೇ ಒಂದು ಸುಯೋಗ. ಅವರು ನಮ್ಮ ಕಾಲೇಜಿನ ಅನೇಕ ಮುಖ್ಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಅದರಲ್ಲೂ ಬುದ್ಧ ಅಧ್ಯಯನ ಕೇಂದ್ರಕ್ಕೆ ತಮ್ಮ ಅಮೂಲ್ಯ ಸಲಹೆ, ಸಹಕಾರ, ವಿಚಾರಗಳನ್ನು ನೀಡಿದ್ದಾರೆ. ಶಾಸನಗಳೆಂದರೆ ನನ್ನ ದೃಷ್ಟಿಯಲ್ಲಿ ಮಾಹಿತಿ. ಭಾರತದಲ್ಲಿ ಕಲ್ಲು ಮತ್ತು ತಾಮ್ರಪಟಗಳಲ್ಲಿ, ಈಜಿಪ್ಟ್‌ನಲ್ಲಿ ಮರಗಳ ಮೇಲೆ, ಚೀನಾದಲ್ಲಿ ಮೂಳೆಗಳ ಮೇಲೆ ಶಾಸನಗಳ ಬರವಣಿಗೆ ದೊರೆತಿವೆ ಎಂದು ತಿಳಿಸಿದರು.

ಪ್ರಸಾರಾಂಗದ ಉಪ ನಿರ್ದೇಶಕರಾದ ಶ್ರೀಮತಿ ಕೆ.ಪಿ. ಲಲಿತ ಉಪಸ್ಥಿತರಿದ್ದರು. ದ್ವಿತೀಯ ಬಿ.ಎಸ್ಸಿಯ ಕು. ನಿರಂಜನಿ ಭಾರ್ಗವ ಪ್ರಾರ್ಥಿಸಿದರು. ಡಾ. ಮೀನಾಕ್ಷಿ ಸ್ವಾಗತಿಸಿದರು. ಡಾ. ಎಂ. ಸೌಮ್ಯ ವಂದಿಸಿದರು. ಡಾ. ಎನ್. ಮಹೇಶ್ವರಿ ನಿರೂಪಿಸಿದರು.

## ಸಾಂಸ್ಕೃತಿಕ, ಸಾಹಿತ್ಯಕ, ಕ್ರೀಡಾ ವೇದಿಕೆಗಳ ಸಮಾರೋಪ ಸಮಾರಂಭ

**ಮೈಸೂರಿನ ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜಿನಲ್ಲಿ** ದಿನಾಂಕ 7.1.2023ರಂದು ಸಾಂಸ್ಕೃತಿಕ, ಸಾಹಿತ್ಯಕ ಹಾಗೂ ಕ್ರೀಡಾ ವೇದಿಕೆಯ ಸಮಾರೋಪ ಸಮಾರಂಭ ಹಮ್ಮಿಕೊಳ್ಳಲಾಗಿತ್ತು. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಡಾ. ವಿಜಯಕುಮಾರಿ ಎಸ್. ಕರಿಕಲ್‌ರವರು ಸಮಾರೋಪ ಭಾಷಣ ಮಾಡುತ್ತಾ ಸಾಂಸ್ಕೃತಿಕ, ಸಾಹಿತ್ಯಕ ಹಾಗೂ ಕ್ರೀಡಾ ವೇದಿಕೆಗಳು ದೇಹ ಮತ್ತು ಮನಸ್ಸುಗಳನ್ನು ಸಮಸ್ಥಿತಿಗೆ ತರುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಸೋಲೇ ಗೆಲುವಿನ ಮೆಟ್ಟಿಲು ಎಂಬ ಸೂಕ್ತಿಯಂತೆ ಕ್ರೀಡೆಗಳು ಬದುಕಿನಲ್ಲಿ ಆತ್ಮಸ್ಥೈರ್ಯ ತುಂಬಿ ಜೀವನದ ಸಮಸ್ಯೆಗಳನ್ನು ಎದುರಿಸುವಲ್ಲಿ ಮುಖ್ಯವಾಗಿರುತ್ತವೆ. ಪ್ರಾತಃಸ್ಮರಣೀಯರಾದ ಅಕ್ಕಮಹಾದೇವಿ, ಕಿತ್ತೂರು ರಾಣಿ ಚನ್ನಮ್ಮ, ಸಾವಿತ್ರಿಬಾಯಿ ಫುಲೆಯಂತಹವರ ಜೀವನ ಮೌಲ್ಯಗಳನ್ನು ರೂಢಿಸಿಕೊಂಡು ಸಮಾಜದಲ್ಲಿ ಆದರ್ಶ ವ್ಯಕ್ತಿಗಳಾಗಿ ರೂಪುಗೊಳ್ಳಬೇಕೆಂದು ಹೇಳಿದರು.

ಬಹುಮಾನ ವಿತರಿಸಿ ಮಾತನಾಡಿದ ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ಸಿ. ವೆಂಕಟೇಶ್‌ರವರು ಕ್ರೀಡೆಯು ವಿದ್ಯಾರ್ಥಿಗಳಿಗೆ ದೃಢವಾದ ಮನಸ್ಸನ್ನು ಸೃಷ್ಟಿಸುವ ಮೂಲ ಮಂತ್ರವಾಗಿದೆ. ಪಠ್ಯದ ಜೊತೆಗೆ ಆಟಗಳು ಸಾಧನೆಯ ಸಾಧನವಾಗಿವೆ. ವಿದ್ಯಾರ್ಥಿಗಳು ಮೊಬೈಲ್ ವ್ಯಾಮೋಹಕ್ಕೆ ಒಳಗಾಗದೆ, ಇಂತಹ ವೇದಿಕೆಗಳನ್ನು ಉತ್ತಮ ಗುರಿ ಸಾಧನೆಗೆ ಸದುಪಯೋಗಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ಆರ್. ಮೂಗೇಶಪ್ಪನವರು ಉನ್ನತ ಕನಸುಗಳು ನನಸಾಗಬೇಕೆಂಬ ಛಲ ವಿದ್ಯಾರ್ಥಿಗಳಲ್ಲಿ ಕಾಲೇಜು ಹಂತದಲ್ಲಿಯೇ ಚಿಗುರಬೇಕು. ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳು ಪ್ರತಿಭೆಗಳ ಮೂಲ ಸೆಲೆಗಳಾಗಿದ್ದು ಸೃಜನಶೀಲ ಚಟುವಟಿಕೆಗಳನ್ನು ಬೆಳೆಸಿಕೊಳ್ಳುವ ಮೂಲಕ ಸಾಧನೆಗೈದು ಕಾಲೇಜಿಗೆ, ಪೋಷಕರಿಗೆ ಹಾಗೂ ಸಂಸ್ಥೆಗೆ ಕೀರ್ತಿ ತರಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಶ್ರೀಮತಿ ಎಂ.ಪಿ. ರಾಜೇಶ್ವರಿ, ದೈಹಿಕ ಶಿಕ್ಷಣ ಶಿಕ್ಷಕರಾದ ಶ್ರೀ ಎಂ. ಶಿವಕುಮಾರಸ್ವಾಮಿರವರು ಉಪಸ್ಥಿತರಿದ್ದರು. ಶ್ರೀಮತಿ ಎಂ.ಎಸ್. ರಶ್ಮಿ ಸ್ವಾಗತಿಸಿದರು. ಕು. ಎಂ.ಎಸ್. ದಿವ್ಯಶ್ರೀ ವಂದಿಸಿದರು. ಕನ್ನಡ ವಿಭಾಗದ ಉಪನ್ಯಾಸಕರಾದ ಡಾ. ಡಿ.ಎಂ. ಮಹೇಂದ್ರಮೂರ್ತಿ ಕಾರ್ಯಕ್ರಮವನ್ನು ನಿರೂಪಿಸಿದರು. ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿನಿಯರು ಹಾಜರಿದ್ದರು.

# ಗುರಿಯನ್ನು ಮೊದಲು ನಿರ್ಧರಿಸಿಕೊಳ್ಳಿ



ಕೊಳ್ಳೇಗಾಲ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಸ್ಪರ್ಧಾತ್ಮಕ ಪರೀಕ್ಷಾ ಘಟಕವನ್ನು ಉಪವಿಭಾಗಾಧಿಕಾರಿಗಳಾದ ಶ್ರೀಮತಿ ಗೀತಾ ಹುಡೇದರವರು ಉದ್ಘಾಟಿಸುತ್ತಿರುವುದು. ಶ್ರೀ ಬಸವದತ್ತ ಮಹದೇವಪ್ರಸಾದ್, ಶ್ರೀ ಹೆಚ್.ಜಿ. ನಟರಾಜನ್, ಪ್ರಾಚಾರ್ಯರಾದ ಡಾ. ಎಂ. ಪ್ರಭು, ಶ್ರೀ ಮಹದೇವಸ್ವಾಮಿ ಹಾಗೂ ವಿದ್ಯಾರ್ಥಿನಿಯರಿದ್ದಾರೆ.

ಸ್ಪರ್ಧಾತ್ಮಕ ಪರೀಕ್ಷೆಗಳ ಯಶಸ್ಸಿಗೆ ಹಾಗೂ ಅವುಗಳ ಆಯಾಮಗಳ ಬಗ್ಗೆ ಪದವಿ ಹಂತದಲ್ಲೆ ವಿದ್ಯಾರ್ಥಿಗಳು ಅರಿತುಕೊಳ್ಳಬೇಕಿದೆ. ವಿದ್ಯಾರ್ಥಿನಿಯರು ಮೊದಲು ತಮ್ಮ ಗುರಿಯನ್ನು ನಿರ್ಧರಿಸಿಕೊಳ್ಳಬೇಕು ಎಂದು ಉಪವಿಭಾಗಾಧಿಕಾರಿಗಳಾದ ಶ್ರೀಮತಿ ಗೀತಾ ಹುಡೇದರವರು ತಿಳಿಸಿದರು.

**ಕೊಳ್ಳೇಗಾಲ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ದಿನಾಂಕ 12.1.2023ರಂದು ರಾಷ್ಟ್ರೀಯ ಸೇವಾ ಯೋಜನೆ ವತಿಯಿಂದ ಆಯೋಜಿಸಿದ್ದ ಸ್ವಾಮಿ ವಿವೇಕಾನಂದರ 160ನೇ ಜಯಂತಿ ಕಾರ್ಯಕ್ರಮದ ಪ್ರಯುಕ್ತ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಘಟಕವನ್ನು ಉದ್ಘಾಟಿಸಿ ಮಾತನಾಡಿದ ಅವರು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಯಶಸ್ಸು ಸಾಧಿಸಲು ಪೂರ್ವಯೋಜಿತ ಸಿದ್ಧತೆಯೇ ಮುನ್ನುಡಿ. ಪದವಿ ಹಂತದ ಪಠ್ಯಕ್ರಮವು ಸ್ಪರ್ಧಾತ್ಮಕ ಪರೀಕ್ಷೆಗೆ ಪೂರಕವಾಗಿರುವುದರಿಂದ ಸದರಿ ಪಠ್ಯಕ್ರಮಕ್ಕೆ ಆದ್ಯತೆ ನೀಡಿ, ಪ್ರಚಲಿತ ವಿದ್ಯಮಾನ, ಸಾಮಾನ್ಯ ಅಧ್ಯಯನಕ್ಕೆ ಸಂಬಂಧಿಸಿದ ವಿದ್ಯಮಾನಗಳನ್ನು ಅರಿತು ನಿರಂತರ ಪ್ರಯತ್ನ ಮಾಡಿದಲ್ಲಿ ಯಶಸ್ಸು ಸಾಧ್ಯ ಎಂದು ತಿಳಿಸಿದರು.

ಪ್ರಾಚಾರ್ಯರಾದ ಡಾ. ಎಂ. ಪ್ರಭುರವರು ಇಂದು ನಾವು ಸ್ವಾಮಿ ವಿವೇಕಾನಂದರ 160ನೇ ಜನ್ಮ ದಿನಾಚರಣೆಯನ್ನು ಆಚರಿಸುತ್ತಿದ್ದು, ಅವರ ಜೀವನ, ದೇಶಭಕ್ತಿ, ಆಧ್ಯಾತ್ಮಿಕತೆ ಮತ್ತು ಸಮರ್ಪಣೆ ಯಾವಾಗಲೂ ನಮಗೆ ಸ್ಫೂರ್ತಿ ನೀಡುತ್ತದೆ. ಸ್ವಾಮಿ ವಿವೇಕಾನಂದರ ಜನ್ಮದಿನದ ನೆನಪಿಗಾಗಿ ಜನವರಿ 12ರಂದು ರಾಷ್ಟ್ರೀಯ ಯುವ ದಿನವನ್ನು ಆಚರಿಸಲಾಗುತ್ತಿದೆ. ವಿದ್ಯಾರ್ಥಿನಿಯರು ಗುರಿ ಮುಟ್ಟುವವರೆಗೆ ಮನೋನಿಗ್ರಹ ಮಾಡಬೇಕು. ಮನಸ್ಸು ಚಂಚಲಗೊಂಡಲ್ಲಿ ಓದಿದ್ದನ್ನು ಗ್ರಹಿಸಲು ಸಾಧ್ಯವಾಗುವುದಿಲ್ಲ. ಪ್ರಾರಂಭದಲ್ಲಿ ಯಶಸ್ಸು ಸಿಗದೇ ಇರಬಹುದು. ಗುರಿ ಸಾಧಿಸುವವರೆಗೆ ನಿರಂತರ ಪ್ರಯತ್ನವಿರಲಿ. ಬದ್ಧತೆಯಲ್ಲಿ ಗೆಲುವು ಸುಲಭ ಎಂದು ಹೇಳಿದರು.

ಐಕ್ಯೂಎಸಿ ಸಂಚಾಲಕರು ಹಾಗೂ ಇತಿಹಾಸ ವಿಭಾಗದ ಮುಖ್ಯಸ್ಥರಾದ ಶ್ರೀ ಹೆಚ್.ಜಿ. ನಟರಾಜನ್‌ರವರು ವಿದ್ಯಾರ್ಥಿನಿಯರಿಗೆ ಸಾಧಕರ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಸಿಇಟಿ ಘಟಕದ ಸಂಚಾಲಕರಾದ ಶ್ರೀ ಮಹದೇವಸ್ವಾಮಿ, ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಾಧಿಕಾರಿಯಾದ ಶ್ರೀ ಬಸವದತ್ತ ಮಹದೇವಪ್ರಸಾದ್‌ರವರು ಉಪಸ್ಥಿತರಿದ್ದರು.

## 35ನೇ ವರ್ಷದ ಶುಶ್ರೂಷ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮ




ಮೈಸೂರಿನ ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್ ವತಿಯಿಂದ ಆಯೋಜಿಸಿದ್ದ 35ನೇ ವರ್ಷದ ಶುಶ್ರೂಷ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮವನ್ನು ಪ್ರಾಂಶುಪಾಲರಾದ ಶ್ರೀಮತಿ ಡಿ.ಎನ್. ರೇಣುಕಾದೇವಿಯವರು ಜ್ಯೋತಿ ಬೆಳಗಿಸಿ ಉದ್ಘಾಟಿಸುತ್ತಿರುವುದು. ಜೊತೆಯಲ್ಲಿ ಬೋಧಕ ವೃಂದದವರು ಮತ್ತು ವಿದ್ಯಾರ್ಥಿಗಳಿದ್ದಾರೆ.

**ಮೈಸೂರಿನ ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್** ವತಿಯಿಂದ ದಿನಾಂಕ 2.1.2023 ರಂದು 35 ನೇ ವರ್ಷದ ಶುಶ್ರೂಷ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮವನ್ನು ಡಾ. ಶಿವರಾತ್ರಿ ರಾಜೇಂದ್ರ ಭವನದಲ್ಲಿ ಆಯೋಜಿಸಲಾಗಿತ್ತು. ಪ್ರಾಂಶುಪಾಲರಾದ ಶ್ರೀಮತಿ ಡಿ.ಎನ್. ರೇಣುಕಾದೇವಿಯವರು ಮಾತನಾಡುತ್ತಾ ನರ್ಸಿಂಗ್ ಶಿಕ್ಷಣಕ್ಕೆ ಜೆಎಸ್‌ಎಸ್ ಸಂಸ್ಥೆಯನ್ನು ಆಯ್ಕೆ ಮಾಡಿಕೊಂಡಿರುವುದಕ್ಕೆ ಸಂತೋಷವನ್ನು ವ್ಯಕ್ತಪಡಿಸುತ್ತಾ, ಜೀವನದಲ್ಲಿ ಯಶಸ್ಸನ್ನು ಪಡೆದುಕೊಳ್ಳಲು ಶ್ರಮವೆಂಬ ಮೆಟ್ಟಿಲನ್ನು ಏರಿದಾಗ ಸಂತೋಷದ ಕ್ಷಣಗಳನ್ನು ಅನುಭವಿಸಬಹುದೆಂದು ತಿಳಿಸಿದರು. ಪ್ರಥಮ ವರ್ಷದ ಸಂಚಾಲಕರಾದ ಶ್ರೀಮತಿ ಎಸ್. ನೀತಾದಲ್ವಿ ವಿದ್ಯಾರ್ಥಿಗಳು ಕನಸಿನ ಗೋಪುರವನ್ನು ಕಟ್ಟಿಕೊಂಡು ಅದನ್ನು ಸಾಕಾರಗೊಳಿಸಿಕೊಳ್ಳಲು ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ತಿಳಿಸಿದರು.

ಕಾರ್ಯಕ್ರಮದ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳ ಪ್ರತಿಭೆ ಹಾಗು ಜ್ಞಾನವನ್ನು ಆಧರಿಸಿ ಫ್ರೆಶಿ ಕ್ವೀನ್ ಮತ್ತು ಫ್ರೆಶಿ ಕಿಂಗ್ ಎಂಬ ಬಿರುದನ್ನು ನೀಡಲಾಯಿತು. ಕು. ವೇದಶ್ರೀ ಮತ್ತು ಶ್ರೀ ಆಕಾಶ್‌ರವರು ಈ ಬಿರುದನ್ನು ಪಡೆದುಕೊಂಡರು. ಶಾಲೆಯ ಉಪನ್ಯಾಸಕಿಯರಾದ ಶ್ರೀಮತಿ ವಿ. ಸುಕನ್ಯ ಹಾಗು ಶ್ರೀಮತಿ ಹೆಚ್.ಎಸ್. ಮಾನಸ ಆಯ್ಕೆ ಪ್ರಕ್ರಿಯೆಯನ್ನು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಬೋಧಕ ಹಾಗು ಬೋಧಕೇತರ ವರ್ಗದವರು, ದ್ವಿತೀಯ ಹಾಗು ತೃತೀಯ ವರ್ಷದ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕು. ವಚನಶ್ರೀ ಮತ್ತು ವಿರೂಪಾಕ್ಷರವರು ಕಾರ್ಯಕ್ರಮವನ್ನು ನಿರೂಪಿಸಿದರು.

ಬ್ರಹ್ಮ ಪಾಶ, ವಿಷ್ಣು ಮಾಯೆ ಎಂಬ ಬಲೆಯ ಬೀಸಿ
ಹೊನ್ನು ಹೆಣ್ಣು ಮಣ್ಣು ತೋರಿ ಮುಕ್ಕಣ್ಣನಾಡಿದ ಬೇಂಟೆಯ
ಆಸೆ ಎಂಬ ಕುಟುಕನಿಕ್ಕಿ
ಹೇಸದೆ ಕೊಂದೆಯಲ್ಲಾ ಗುಹೇಶ್ವರಾ

**ಅಲ್ಲಮಪ್ರಭು**

## ಶ್ರೀ ಸಿದ್ಧೇಶ್ವರ ಸ್ವಾಮಿಗಳವರಿಗೆ ಜೆಎಸ್‌ಎಸ್ ಸಂಸ್ಥೆಗಳ ವತಿಯಿಂದ ಶ್ರದ್ಧಾಂಜಲಿ

### ಜೆಎಸ್‌ಎಸ್ ಕಾಲೇಜು, ಊಟಿ ರಸ್ತೆ, ಮೈಸೂರು

**ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ** ದಿನಾಂಕ 3.1.2023ರಂದು ವಿಜಯಪುರದ ಜ್ಞಾನಯೋಗಾಶ್ರಮದ ನಿರಾಭಾರಿ ಚರಮೂರ್ತಿ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳವರ ಗೌರವಾರ್ಥ ಸಂತಾಪಸೂಚಕ ಸಭೆಯನ್ನು ನಡೆಸಲಾಯಿತು. ಪ್ರಾಧ್ಯಾಪಕರಾದ ಡಾ. ಬಿ. ಪ್ರಭುಸ್ವಾಮಿ ಕಟ್ನವಾಡಿಯವರು ಮಾತನಾಡಿ ಪೂಜ್ಯ ಸಿದ್ಧೇಶ್ವರ ಶ್ರೀಗಳು ವಿಶ್ವಕಂಡ ಮಹಾಸಂತರಾಗಿದ್ದಾರೆ. ಭಕ್ತರಿಂದ ನಡೆದಾಡುವ ದೇವರೆಂದು ಆರಾಧಿಸಲ್ಪಟ್ಟವರು, ಸರಳವಾದ ಬದುಕನ್ನು ನಡೆಸಿದವರು. ಅವರ ಪ್ರವಚನದಲ್ಲಿ ಹೂವಿಗೆ ಮಹತ್ವದ ಸ್ಥಾನವಿತ್ತು. ಅಂತಹ ಹೂವಿನಂತೆಯೇ ಬದುಕು ಸಾಗಿಸಿ ಅದರ ಸುವಾಸನೆಯನ್ನು ಭಕ್ತರಿಗೆ ನೀಡಿ ಸಾರ್ಥಕವಾದ ಆಧ್ಯಾತ್ಮಿಕ ಬದುಕನ್ನು ಸಾಗಿಸಿದವರು ಶ್ರೀಗಳು. ಬಯಲು ಬಯಲನೆ ಬಿತ್ತಿ ಬಯಲು ಬಯಲನೆ ಬೆಳೆದು ಬಯಲು ಬಯಲಾಗಿ ಬಯಲಾದಿರಯ್ಯ ಎಂಬ ಅಲ್ಲಮನ ಮಾತು ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳ ಬದುಕಿಗೆ ಅರ್ಥವತ್ತಾದುದು. ಪ್ರಶಸ್ತಿಗಳು ಅರಸಿ ಬಂದರೂ ಸನ್ಯಾಸಿಯಾದ ನನಗೆ ಅವುಗಳ ಹಂಗೇಕೆ ಎಂದು ನಯವಾಗಿ ತಿರಸ್ಕರಿಸಿದವರು. ಆಧ್ಯಾತ್ಮದ ಸವಿಜೇನನ್ನು ಭಕ್ತ ಸಮುದಾಯಕ್ಕೆ ಹರಡಿ ಅಲ್ಲಿ ಶಾಶ್ವತವಾದ ಸ್ಥಾನವನ್ನು ಪಡೆದಿದ್ದಾರೆ. ಅವರು ಹೇಳಿರುವ ಸನ್ಮಾರ್ಗದತ್ತ ಸಾಗಿದರೆ ಅದುವೆ ಅವರ ದಿವ್ಯಚೇತನಕ್ಕೆ ನಾವು ಕೊಡುವ ಗೌರವವಾಗುತ್ತದೆ ಎಂದರು.

ಸಂತಾಪ ಸೂಚಕ ಸಭೆಯಲ್ಲಿ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯ, ಪದವಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಂ.ಪಿ. ವಿಜಯೇಂದ್ರಕುಮಾರ್, ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಸ್. ಸೋಮಶೇಖರ್, ಅಧ್ಯಾಪಕ, ಅಧ್ಯಾಪಕೇತರ ವರ್ಗ ಮತ್ತು ವಿದ್ಯಾರ್ಥಿಗಳು ಪಾಲ್ಗೊಂಡು ಮೌನವಾಚರಿಸುವ ಮೂಲಕ ಅಂತಿಮ ನಮನ ಸಲ್ಲಿಸಿದರು. □

***



ಬೆಂಗಳೂರಿನ ಹೆಚ್‌ಎಸ್‌ಆರ್ ಬಡಾವಣೆಯ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ಶ್ರೀ ಸಿದ್ಧೇಶ್ವರ ಸ್ವಾಮಿಗಳವರಿಗೆ ಭಕ್ತಿಪೂರ್ವಕವಾದ ಶ್ರದ್ಧಾಂಜಲಿ ಸಲ್ಲಿಸಲಾಯಿತು

## ಜೆಎಸ್‌ಎಸ್ ಶಿಕ್ಷಣ ಸಮುಚ್ಚಯ, ಕೊಳ್ಳೇಗಾಲ

**ಕೊಳ್ಳೇಗಾಲದ ಜೆಎಸ್‌ಎಸ್ ಶಿಕ್ಷಣ ಸಮುಚ್ಚಯದಲ್ಲಿ** ವಿಜಯಪುರ ಜ್ಞಾನಯೋಗಾಶ್ರಮದ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳವರಿಗೆ ಭಕ್ತಿಪೂರ್ವಕ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು. ಕನ್ನಡ ವಿಭಾಗದ ಅಧ್ಯಾಪಕರಾದ ಶ್ರೀ ಎಚ್.ಎಂ. ನಾಗಭೂಷಣ ಪೂಜ್ಯರನ್ನು ಕುರಿತು ಮಾತನಾಡಿದರು. ಪದವಿ ಕಾಲೇಜಿನ ಪ್ರಾಚಾರ್ಯರಾದ ಡಾ. ಎಂ. ಪ್ರಭು, ಪದವಿಪೂರ್ವ ಕಾಲೇಜಿನ ಪ್ರಾಚಾರ್ಯರಾದ ಶ್ರೀ ಎನ್. ಮಹಾದೇವಸ್ವಾಮಿ, ನರ್ಸಿಂಗ್ ಶಾಲೆಯ ಪ್ರಾಚಾರ್ಯರಾದ ಶ್ರೀ ಹೇಮೇಶ್‌ಮೂರ್ತಿ ಹಾಗೂ ಸಮುಚ್ಚಯದ ಅಧ್ಯಾಪಕ, ಅಧ್ಯಾಪಕೇತರರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿ ಮೌನಾಚರಣೆ ಮಾಡುವುದರ ಮೂಲಕ ಪೂಜ್ಯರಿಗೆ ಗೌರವ ಸಲ್ಲಿಸಲಾಯಿತು.

## ಜೆಎಸ್‌ಎಸ್ ಪಬ್ಲಿಕ್ ಶಾಲೆ, ಬಾಗೆ

**ಬಾಗೆಯ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ** ವಿಜಯಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಸ್ವಾಮಿಗಳವರಿಗೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು.

ಪ್ರಾಂಶುಪಾಲರಾದ ಶ್ರೀ ಬಿ. ಮಧುಕುಮಾರ್ ಮಾತನಾಡುತ್ತಾ ಶ್ರೀ ಸಿದ್ಧೇಶ್ವರ ಶ್ರೀಗಳು ಶ್ರೀಮಠಕ್ಕೆ ತುಂಬಾ ಆಪ್ತರಾಗಿದ್ದವರು. ಶ್ರೀಮಠವು ಶ್ರೀಗಳ ಸಾವಿರಾರು ಪ್ರವಚನಗಳನ್ನು ಬೇರೆ ಬೇರೆ ಕಡೆಗಳಲ್ಲಿ ಆಯೋಜಿಸಿರುವುದು ಅವರ ಆಧ್ಯಾತ್ಮಿಕ ಕೌಶಲಕ್ಕೆ ಹಿಡಿದ ಕನ್ನಡಿ ಎಂದು ತಿಳಿಸಿದರು.

ಶ್ರೀ ಪ್ರಕಾಶ್, ಶ್ರೀ ಜಿ.ಸಿ. ಸುರೇಶ್, ಶ್ರೀ ಚಂದ್ರುಗುರುಪಾದ ನುಡಿನಮನ ಸಲ್ಲಿಸಿದರು.

***



ವಿಜಯಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರ ಗೌರವಾರ್ಥ ಸುತ್ತೂರು ಜೆಎಸ್‌ಎಸ್ ಸಂಸ್ಥೆಯ ಮುಖ್ಯಸ್ಥರು, ಶಾಲೆಯ ಶಿಕ್ಷಕರು ಹಾಗೂ ಸಹಸ್ರಾರು ವಿದ್ಯಾರ್ಥಿಗಳು ಮೌನ ನಮನ ಸಲ್ಲಿಸಿದರು.

## ಜೆಎಸ್‌ಎಸ್ ಪಬ್ಲಿಕ್ ಶಾಲೆ, ಶಿಕ್ಷಕರ ಬಡಾವಣೆ

**ಮೈಸೂರಿನ ಶಿಕ್ಷಕರ ಬಡಾವಣೆಯ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ** ವಿಜಯಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಸ್ವಾಮಿಗಳವರಿಗೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಆಶಾರವರು ಪರಮಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳವರ ಬಾಲ್ಯ, ಶಿಕ್ಷಣ, ಆಧ್ಯಾತ್ಮಿಕ ಜೀವನದ ಬಗ್ಗೆ ಮಕ್ಕಳಿಗೆ ತಿಳಿಸಿದರು. ಪ್ರಾಂಶುಪಾಲರು, ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಶ್ರೀ ಸಿದ್ಧೇಶ್ವರ ಸ್ವಾಮಿಗಳವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.


***

## ಜೆಎಸ್‌ಎಸ್ ಪಬ್ಲಿಕ್ ಶಾಲೆ, ಮಂಡ್ಯ



**ಮಂಡ್ಯದ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ** ವಿಜಯಪುರದ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಸ್ವಾಮಿಗಳವರ ಗೌರವಾರ್ಥ ಎರಡು ನಿಮಿಷಗಳ ಕಾಲ ಮೌನ ಆಚರಿಸಲಾಯಿತು. ಪ್ರಾಂಶುಪಾಲರಾದ ಶ್ರೀ ಕುಮಾರಸ್ವಾಮಿಯವರು ನುಡಿನಮನ ಸಲ್ಲಿಸಿದರು.

***



ಗುಂಡ್ಲುಪೇಟೆಯ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳಲ್ಲಿ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರಿಗೆ ಭಕ್ತಿಪೂರ್ವಕ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು

## ಜೆಎಸ್‌ಎಸ್ ಆಸ್ಪತ್ರೆ, ಮೈಸೂರು



ವಿಜಯಪುರದ ಜ್ಞಾನಯೋಗಾಶ್ರಮದ ಪೂಜ್ಯ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳ ಗೌರವಾರ್ಥ **ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ** ದಿನಾಂಕ 3.1.2023 ರಂದು ಸಂತಾಪ ಸೂಚಕ ಸಭೆಯನ್ನು ಆಯೋಜಿಸಲಾಗಿತ್ತು. ಜೆಎಸ್‌ಎಸ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ. ಸಿ.ಪಿ. ಮಧು ಶ್ರದ್ಧಾಂಜಲಿ ಸಲ್ಲಿಸಿ ಮಾತನಾಡಿ ಪೂಜ್ಯ ಸ್ವಾಮಿಗಳವರು ಸುತ್ತೂರು ಶ್ರೀಮಠದೊಡನೆ ಹೊಂದಿದ್ದ ಅತ್ಯಂತ ಆತ್ಮೀಯ ಸಂಬಂಧದ ಬಗ್ಗೆ ವಿವರಿಸುತ್ತಾ, ಜೆಎಸ್‌ಎಸ್ ಮಹಾವಿದ್ಯಾಪೀಠವು ಆಯೋಜಿಸಿದ್ದ ವಿವಿಧ ವ್ಯಕ್ತಿತ್ವ ವಿಕಸನ ಶಿಬಿರಗಳ ಹಿಂದೆ ಪೂಜ್ಯರ ಕ್ರಿಯಾಶೀಲ ಮಾರ್ಗದರ್ಶನವನ್ನು ಸ್ಮರಿಸಿದರು. ಪೂಜ್ಯರು ಮನುಕುಲಕ್ಕೆ ನೀಡಿದ ಮಾರ್ಗದರ್ಶನ ಸಮಾಜದ ಶ್ರೇಯೋಭಿವೃದ್ಧಿಗೆ ಹಾಗೂ ಸರ್ವತೋಮುಖ ಅಭಿವೃದ್ಧಿಗೆ ಸಹಕಾರಿಯಾಗಿದೆ ಎಂದು ತಿಳಿಸಿದರು. ಐಪಿ ಮ್ಯಾನೇಜರ್ ಶ್ರೀ ಎಂ.ಹೆಚ್. ಚಂದ್ರಶೇಖರ್‌ರವರು ಮಾತನಾಡಿದರು. ಎರಡು ನಿಮಿಷಗಳ ಕಾಲ ಮೌನಾಚರಣೆ ಮಾಡಲಾಯಿತು. ಸಭೆಯಲ್ಲಿ ಆಸ್ಪತ್ರೆಯ ಅಧಿಕಾರಿಗಳು, ವೈದ್ಯರುಗಳು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಜೆಎಸ್‌ಎಸ್ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜು, ಶ್ರೀ ಶಿವರಾತ್ರೀಶ್ವರ ನಗರ

ವಿಜಯಪುರದ ಜ್ಞಾನಯೋಗಾಶ್ರಮದ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮೀಜಿಗಳು ಲಿಂಗೈಕ್ಯರಾದ ಪ್ರಯುಕ್ತ **ಶ್ರೀ ಶಿವರಾತ್ರೀಶ್ವರ ನಗರದ ಜೆಎಸ್‌ಎಸ್ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜಿನಲ್ಲಿ** ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮುಖ್ಯೋಪಾಧ್ಯಾಯರಾದ ಶ್ರೀ ಎಸ್.ಪಿ. ಶಿವಶಂಕರ್‌ರವರು ಮಾತನಾಡಿ ನಡೆದಾಡುವ ದೇವರೆಂದು ಕರೆಯಲ್ಪಡುವ ಪೂಜ್ಯರ ಸಾಧನೆ ಅನುಪಮವಾದದ್ದು, ಸರಳ ಜೀವನಕ್ಕೆ ಮಾದರಿಯಾದ ಪೂಜ್ಯರು ನೀಡುತ್ತಿದ್ದ ಪ್ರವಚನಗಳು ಜನಮಾನಸದಲ್ಲಿ ಅಚ್ಚಳಿಯದೇ ಉಳಿದಿವೆ. ಸಾಮಾಜಿಕ ಜಾಲತಾಣಗಳಲ್ಲಿರುವ ಪೂಜ್ಯರ ಪ್ರವಚನಗಳನ್ನು ವಿದ್ಯಾರ್ಥಿಗಳು ನೋಡಿ, ಕೇಳಿ ತಮ್ಮ ಬದುಕನ್ನು ಆದರ್ಶಮಯ ಮಾಡಿಕೊಳ್ಳಬೇಕೆಂದು ತಿಳಿಸಿದರು.

## ಬಿಳಿಗೆರೆ ಗ್ರಾಮದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ



**ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಶಲ್ಯತಂತ್ರ ವಿಭಾಗದ** ವತಿಯಿಂದ ಉಚಿತ ತಪಾಸಣಾ ಶಿಬಿರವನ್ನು ಬಿಳಿಗೆರೆ ಮಹದೇಶ್ವರ ಕ್ಲಿನಿಕ್ ಸಹಭಾಗಿತ್ವದೊಂದಿಗೆ ದಿನಾಂಕ 21.12.2022ರಂದು ಹಮ್ಮಿಕೊಳ್ಳಲಾಗಿತ್ತು. ಶಿಬಿರದಲ್ಲಿ ಶಲ್ಯತಂತ್ರ ವಿಭಾಗಕ್ಕೆ ಸಂಬಂಧಪಟ್ಟ ವ್ಯಾಧಿಗಳಿಗೆ ಅಂದರೆ ಪೈಲ್ಸ್, ಫಿಸ್ತುಲಾ, ಫಿಷರ್, ಹರ್ನಿಯಾ ಮತ್ತು ಇತರೇ ಶಸ್ತ್ರಚಿಕಿತ್ಸಾ ವ್ಯಾಧಿಗಳಿಗೆ ತಪಾಸಣಾ ಹಾಗೂ ಸಲಹೆಯನ್ನು ನೀಡಲಾಯಿತು. ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಿಂದ ಡಾ. ಸಿದ್ದಯ್ಯ ಆರಾಧ್ಯಮಠ, ಡಾ. ಪೂರ್ಣಿಮ ಜಾಲವಾದಿ, ಡಾ. ಜೆ.ವಿ. ಆದಿತ್ಯ, ಸ್ನಾತಕೋತರ ವಿದ್ಯಾರ್ಥಿಗಳು, ಕಲಿಕಾ ವೈದ್ಯರುಗಳು ಹಾಗೂ ಶುಶ್ರೂಷಕರನ್ನು ನಿಯೋಜಿಸಲಾಗಿತ್ತು. ಶಿಬಿರದಲ್ಲಿ 243 ಮಂದಿ ಶಿಬಿರದ ಪ್ರಯೋಜನ ಪಡೆದರು, ಅವರಲ್ಲಿ 8 ಮಂದಿ ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾಯಿತು. ಒಟ್ಟು 15 ಮಂದಿಗೆ ಒಳರೋಗಿ ಚಿಕಿತ್ಸೆಯ ಅವಶ್ಯಕತೆ ಇದ್ದು, ಅವರಿಗೆ ವಿಶೇಷ ರಿಯಾಯಿತಿ ದರದಲ್ಲಿ ಚಿಕಿತ್ಸೆಯನ್ನು ಮಾಡಲಾಗುವುದೆಂದು ತಿಳಿಸಲಾಗಿದೆ.

## ದೇವಲಾಪುರ ಪ್ರೌಢಶಾಲೆಯ ವಿದ್ಯಾರ್ಥಿ ಸಂಘದ ಸಮಾರೋಪ



**ದೇವಲಾಪುರ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ** ದಿನಾಂಕ 9.1.2023ರಂದು ವಿದ್ಯಾರ್ಥಿ ಸಂಘದ ಸಮಾರೋಪ ನಡೆಯಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನಿವೃತ್ತ ಶಿಕ್ಷಕರಾದ ಶ್ರೀ ಎ.ಪಿ. ನಟರಾಜುರವರು ಜೀವನದಲ್ಲಿ ಮುನ್ನುಗ್ಗುವುದನ್ನು ಕಲಿಯಿರಿ. ಮುನ್ನುಗ್ಗಿದರೆ ಮಾತ್ರ ಮುಂದೆ ಬರಲು ಸಾಧ್ಯ. ಹಾಗೆಯೇ ನಗು ಉತ್ತಮ ಆರೋಗ್ಯದ ಗುಟ್ಟು ಎಂದರು. ಹಾಡು, ನೃತ್ಯ ಮತ್ತು ಮಿಮಿಕ್ರಿ ಮಾಡುವುದರ ಮೂಲಕ ಮಕ್ಕಳನ್ನು ರಂಜಿಸಿದರು.

ನಿವೃತ್ತ ಮುಖ್ಯೋಪಾಧ್ಯಾಯರಾದ ಶ್ರೀಮತಿ ಸಿ. ಸುಲೋಚನಾರವರು ಸಮಯದ ಬಗ್ಗೆ ಅರಿವಿರಲಿ. ಸಮಯದ ಸದುಪಯೋಗ ಮಾಡಿಕೊಂಡರೆ ಜೀವನದಲ್ಲಿ ಎತ್ತರಕ್ಕೆ ಬೆಳೆಯಬಹುದು. ವಿದ್ಯೆ ಒಂದು ತಪಸ್ಸು, ಆ ತಪಸ್ಸಾಧನೆ ಮಾಡಬೇಕಾದರೆ ಕಠಿಣ ಪರಿಶ್ರಮ, ಆತ್ಮವಿಶ್ವಾಸ, ಸತತ ಪ್ರಯತ್ನವಿರಬೇಕು. ಆ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಪ್ರಯತ್ನಶೀಲರಾಗಬೇಕು ಎಂದು ಹೇಳಿದರು.

ಸಾಂಸ್ಕೃತಿಕ ವಿಭಾಗದ ವಿಜೇತ ವಿದ್ಯಾರ್ಥಿಗಳಿಗೆ ಶ್ರೀ ಎ.ಪಿ. ನಟರಾಜುರವರು ಕ್ರೀಡಾ ವಿಭಾಗದಲ್ಲಿ ವಿಜೇತರಾದ ಮಕ್ಕಳಿಗೆ ಶ್ರೀಮತಿ ಸಿ. ಸುಲೋಚನಾರವರು ಬಹುಮಾನ ವಿತರಿಸಿದರು.

9ನೇ ತರಗತಿ ವಿದ್ಯಾರ್ಥಿಗಳಾದ ಕು. ಪಿ. ಮೇಘ ಮತ್ತು ತಂಡದವರು ಪ್ರಾರ್ಥಿಸಿದರು. ದೈಹಿಕ ಶಿಕ್ಷಣ ಶಿಕ್ಷಕರಾದ ಶ್ರೀ ಎಲ್. ಲೋಕೇಶ್ ಸ್ವಾಗತಿಸಿದರು. ಶ್ರೀಮತಿ ಕೆ.ಪಿ. ಮಾದಲಾಂಬಿಕ ವಂದಿಸಿದರು. ಕು. ಜಯಂತ್ ಕುಮಾರ್ ಹಾಗೂ ಮಹೇಶ್ ನಿರೂಪಿಸಿದರು.

## ವಿಶ್ವಮಾನವ ದಿನ

**ಸುತ್ತೂರಿನ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ** ದಿನಾಂಕ 29.12.2022 ರಂದು ರಾಷ್ಟ್ರಕವಿ ಕುವೆಂಪುರವರ ಜನ್ಮ ದಿನಾಚರಣೆಯ ಅಂಗವಾಗಿ ವಿಶ್ವಮಾನವ ದಿನಾಚರಣೆಯನ್ನು ಆಚರಿಸಲಾಯಿತು.

ಬಿ.ಇಡಿ. ಪ್ರಶಿಕ್ಷಣಾರ್ಥಿಗಳಾದ ಅಕ್ಷಿತ, ಅನುಜ, ಅಂಜಲಿ, ನಂದನರವರುಗಳು ಕುವೆಂಪುರವರ ಜೀವನಕ್ರಮ, ಸಾಹಿತ್ಯ ಸಾಧನೆ, ವಿಶ್ವಮಾನವ ಸಂದೇಶದ ಬಗ್ಗೆ ಮಾತನಾಡಿದರು. ಚೇತನ್, ಪವಿತ್ರ, ಜಯಲಕ್ಷ್ಮಿರವರು ಕುವೆಂಪುರವರಿಗೆ ಗೀತನಮನ ಸಲ್ಲಿಸಿದರು.

ಸಹಾಯಕ ಪ್ರಾಧ್ಯಾಪಕರಾದ ಶ್ರೀ ಜಿ.ಎನ್. ಮಂಜುನಾಥ್ ಕುವೆಂಪುರವರ ಸಾಹಿತ್ಯದ ವೈಶಿಷ್ಟ್ಯದ ಬಗ್ಗೆ ತಿಳಿಸಿದರು. ಕಾಲೇಜು ಪ್ರಾಂಶುಪಾಲರಾದ ಡಾ. ಹೆಚ್.ಎಂ. ಮಹೇಶ್‌ರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಸಹಾಯಕ ಪ್ರಾಧ್ಯಾಪಕರಾದ ಶ್ರೀ ಕೆ.ವಿ. ಯೋಗೀಶ, ಶ್ರೀ ಬಿ.ಜೆ. ಆದರ್ಶರವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಕು. ಮೋನಿಕ ಪ್ರಾರ್ಥಿಸಿದರು. ಶ್ರೀ ನಂಜೇಶ್ ಸ್ವಾಗತಿಸಿದರು, ಕು. ನೇತ್ರರವರು ವಂದಿಸಿದರು. ಕು. ಸೌಜನ್ಯರವರು ನಿರೂಪಿಸಿದರು.



ಶ್ರೀ ಸುತ್ತೂರು ಕ್ಷೇತ್ರದಲ್ಲಿ ಬೆಂಗಳೂರಿನ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಹಾಗೂ ಮೈಸೂರಿನ ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಸಮುಚ್ಚಯದ ವಿಶೇಷಚೇತನರ ಪಾಲಿಟೆಕ್ನಿಕ್ ಇವರ ಸಂಯುಕ್ತಾಶ್ರಯದಲ್ಲಿ 2022–23ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರವನ್ನು ವಿಶೇಷಚೇತನರ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದರು. ಚಿತ್ರದಲ್ಲಿ ಸುತ್ತೂರಿನ ಜೆಎಸ್‌ಎಸ್ ಸಂಸ್ಥೆಗಳ ಆಡಳಿತಾಧಿಕಾರಿಗಳಾದ ಶ್ರೀ ಎಸ್.ಪಿ. ಉದಯಶಂಕರ್ ಹಾಗೂ ಪಾಲಿಟೆಕ್ನಿಕ್‌ನ ನೌಕರರ ವರ್ಗದವರನ್ನು ಕಾಣಬಹುದು.

## ರಾಷ್ಟ್ರೀಯ ಯುವ ದಿನ




**ಸುತ್ತೂರು ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ** ದಿನಾಂಕ 12.1.2023ರಂದು ರಾಷ್ಟ್ರೀಯ ಯುವ ದಿನವನ್ನು ಹಮ್ಮಿಕೊಳ್ಳಲಾಗಿತ್ತು. ಸ್ವಾಮಿ ವಿವೇಕಾನಂದರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ನಮನ ಸಲ್ಲಿಸಲಾಯಿತು.

ಪ್ರಶಿಕ್ಷಣಾರ್ಥಿಗಳಾದ ಅಕ್ಷಿತ, ಬಾಲಾಜಿ, ಪವಿತ್ರರವರು ಸ್ವಾಮಿ ವಿವೇಕಾನಂದರ ಜೀವನ, ಶೈಕ್ಷಣಿಕ ಚಿಂತನೆ, ವಿಚಾರವಾಣಿಗಳು ಹಾಗೂ ಯುವ ದಿನದ ಮಹತ್ವದ ಬಗ್ಗೆ ಮಾತನಾಡಿದರು.

ಸಹಾಯಕ ಪ್ರಾಧ್ಯಾಪಕರಾದ ಕೆ.ವಿ. ಯೋಗೇಶ್ ಯುವದಿನ ಕೇವಲ ಆಚರಣೆಯಾಗದೆ, ವಿವೇಕಾನಂದರ ಆದರ್ಶಗಳ ಪರಿಪಾಲನೆಯಾಗುವಂತಾಗಬೇಕೆಂದರು. ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜು ಪ್ರಾಂಶುಪಾಲರಾದ ಡಾ. ಹೆಚ್.ಎಂ. ಮಹೇಶ್ ರಾಷ್ಟ್ರೀಯ ಯುವ ದಿನಾಚರಣೆಯ ಮಹತ್ವ, ವಿವೇಕಾನಂದರ ಶೈಕ್ಷಣಿಕ ಚಿಂತನೆಗಳು ಹಾಗೂ ಯುವಜನರ ಮೇಲೆ ಅವರ ಪ್ರಭಾವದ ಬಗ್ಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಬೋಧಕರು ಮತ್ತು ಬೋಧಕೇತರರು ಉಪಸ್ಥಿತರಿದ್ದರು. ಕು. ನಂದನ ಪ್ರಾರ್ಥಿಸಿದರು. ಕು. ಕಾವ್ಯ ಸ್ವಾಗತಿಸಿದರು. ಕು. ಮೋನಿಕ ವಂದಿಸಿದರು ಹಾಗೂ ಕು. ನೇತ್ರ ನಿರೂಪಿಸಿದರು.



ಸುತ್ತೂರು ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ 13ನೇ ರಾಷ್ಟ್ರೀಯ ಮತದಾರರ ದಿನಾಚರಣೆಯನ್ನು ಆಚರಿಸಲಾಯಿತು. ಸಮಾಜ ವಿಜ್ಞಾನ ಶಿಕ್ಷಕರಾದ ಶ್ರೀ ದಯಾನಂದಸ್ವಾಮಿಯವರು ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಇದೇ ಸಂದರ್ಭದಲ್ಲಿ ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕರು ಪ್ರತಿಜ್ಞಾವಿಧಿ ಸ್ವೀಕರಿಸಿದರು.

## ಹುತಾತ್ಮರ ದಿನಾಚರಣೆ

**ಮೈಸೂರಿನ ಊಟಿ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ** ದಿನಾಂಕ 30.1.2023ರಂದು ಹುತಾತ್ಮರ ದಿನವನ್ನು ಆಚರಿಸಲಾಯಿತು.

ಇತಿಹಾಸ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಆರ್. ಸುಜಾತಕುಮಾರಿ ಮಾತನಾಡುತ್ತಾ ಮಹಾತ್ಮ ಗಾಂಧೀಜಿ ಈ ಜಗತ್ತೇ ಕಂಡರಿಯದ ಅಪೂರ್ವ ವ್ಯಕ್ತಿ. ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿಯವರು ವಹಿಸಿದ ಪಾತ್ರ ಅವಿಸ್ಮರಣೀಯವಾದುದು. ಗಾಂಧೀಜಿಯವರ ಮೂಲತತ್ವಗಳಾದ ಸತ್ಯ, ಅಹಿಂಸೆ ಮತ್ತು ಸಾಮರಸ್ಯಗಳಂತಹ ಆದರ್ಶಗಳನ್ನು ನಮ್ಮ ಹೃದಯದಲ್ಲಿ ಪ್ರತಿಷ್ಠಾಪಿಸಿಕೊಳ್ಳುವುದೇ ನಾವು ಅವರಿಗೆ ನಿರ್ಮಿಸುವ ಯೋಗ್ಯ ಸ್ಮಾರಕವಾಗಿದೆ. ನಾವೇ ಶ್ರೇಷ್ಠರು ಮತ್ತು ಅಜೇಯರು ಎಂದು ಭಾವಿಸಿದ್ದ ಬ್ರಿಟಿಷರನ್ನೂ ಕೇವಲ ಸತ್ಯಾಗ್ರಹ ಎಂಬ ಆತ್ಮಬಲದಿಂದ ಮಣಿಸಿ ನಮಗೆಲ್ಲ ಸ್ವಾತಂತ್ರ್ಯ ತಂದು ಕೊಟ್ಟರು. ಜಗತ್ತಿನಲ್ಲಿ ಅಹಿಂಸಾತ್ಮಕವಾಗಿ ಸ್ವಾತಂತ್ರ್ಯ ಗಳಿಸಿದ್ದು ಭಾರತವೊಂದೇ. ಆ ಶ್ರೇಯಸ್ಸು ಗಾಂಧೀಜಿಗೆ ಸಲ್ಲಬೇಕು ಎಂದು ಹೇಳಿದರು.

ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಸರ್ವಧರ್ಮ ಸಂರಕ್ಷಣಾ ಪ್ರತಿಜ್ಞೆಯನ್ನು ವಿದ್ಯಾರ್ಥಿಗಳಿಗೆ ಬೋಧಿಸಿದರು. ರಾಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಎಂ.ಪಿ. ಮಹದೇವಸ್ವಾಮಿಯವರು ಸ್ವಾಗತಿಸಿದರು. ಪದವಿ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಂ.ಪಿ. ವಿಜಯೇಂದ್ರ ಕುಮಾರ್ ಹಾಗೂ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಸೋಮಶೇಖರ್‌ರವರು ಉಪಸ್ಥಿತರಿದ್ದರು. ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಆರ್.ಜಿ. ಆಶಾ ವಂದಿಸಿದರು.

## ರಾಷ್ಟ್ರೀಯ ಮತದಾರರ ದಿನ

**ನಂಜನಗೂಡಿನ ಜೆಎಸ್‌ಎಸ್ ಕಾಲೇಜಿನಲ್ಲಿ** ದಿನಾಂಕ 25.1.2023ರಂದು ರಾಜ್ಯಶಾಸ್ತ್ರ ವಿಭಾಗ ಮತ್ತು ಐಕ್ಯೂಎಸಿ ವತಿಯಿಂದ 13ನೇ ರಾಷ್ಟ್ರೀಯ ಮತದಾರರ ದಿನಾಚರಣೆಯನ್ನು ಆಚರಿಸಲಾಯಿತು.

ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಬಿ. ರೂಪ ಮಾತನಾಡುತ್ತಾ ಭಾರತದ ಚುನಾವಣಾ ಆಯೋಗವನ್ನು 1950ರ ಜನವರಿ 25ರಂದು ಸ್ಥಾಪಿಸಲಾಯಿತು. ಅದರ ಸಂಸ್ಥಾಪನಾ ದಿನದ ನೆನಪಿಗಾಗಿ 2011ರಿಂದ ಪ್ರತಿ ವರ್ಷ ಜನವರಿ 25ನ್ನು ರಾಷ್ಟ್ರೀಯ ಮತದಾರರ ದಿನವನ್ನಾಗಿ ಆಚರಿಸಲಾಗುತ್ತಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಗಳು ಅಗತ್ಯ ಮತ್ತು ಅನಿವಾರ್ಯ. ಚುನಾವಣೆಗಳು ಯಶಸ್ವಿಯಾಗಬೇಕಾದರೆ ಚುನಾವಣೆಗಳಲ್ಲಿ ಮತದಾರರು ಸಕ್ರಿಯವಾಗಿ ಭಾಗವಹಿಸಬೇಕು. ಅವರಲ್ಲಿ ರಾಜಕೀಯ ಪ್ರಜ್ಞೆ ಇರಬೇಕು, ತಮ್ಮ ಮತವನ್ನು ಪ್ರತಿಯೊಬ್ಬರೂ ಪ್ರಾಮಾಣಿಕವಾಗಿ ನಿಷ್ಪಕ್ಷಪಾತವಾಗಿ ಮತ್ತು ನಿರ್ಭೀತಿಯಿಂದ ಚಲಾಯಿಸಬೇಕು, ಮತದಾನ ಎಲ್ಲರಲ್ಲೂ ಸಮಾನತೆಯನ್ನು ತರುವುದರಲ್ಲದೆ ಅದು ವ್ಯಕ್ತಿಯ ಆತ್ಮಗೌರವವನ್ನು ಹೆಚ್ಚಿಸುತ್ತದೆ. ಮತಪತ್ರವು ತುಪಾಕಿಯ ಗುಂಡಿಗಿಂತ ಶಕ್ತಿಶಾಲಿಯಾದುದು ಎಂಬ ಹೇಳಿಕೆಯನ್ನು ಪ್ರಸ್ತಾಪಿಸಿ ಪ್ರತಿಯೊಬ್ಬರೂ ದೇಶದ ಅಭಿವೃದ್ಧಿಯ ದೃಷ್ಟಿಯಿಂದ ಉತ್ತಮ ಸರ್ಕಾರದ ರಚನೆಯ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕೆಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕಾಲೇಜಿನ ಪ್ರಾಚಾರ್ಯರಾದ ಪ್ರೊ. ಹೆಚ್.ಎಸ್. ನಾಗೇಂದ್ರಕುಮಾರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕು. ಮಂಜುಳ ಮತ್ತು ತಂಡದವರು ಪ್ರಾರ್ಥಿಸಿದರು. ಶ್ರೀ ಹೆಚ್.ಆರ್. ಗುರು ಮತದಾರರ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು. ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀ ಹೆಚ್.ಎಸ್. ಪರಶಿವ ಸ್ವಾಗತಿಸಿದರು. ಕು. ಚಂದ್ರಕಲಾ ವಂದಿಸಿದರು. ಕು. ಅರ್ಪಿತ ಕಾರ್ಯಕ್ರಮ ನಿರೂಪಿಸಿದರು.

## ಅರಿವಿನ ಬಾಗಿಲು ತೆರೆಯಬೇಕಾದರೆ ಅಹಂಕಾರ ತೊರೆಯಬೇಕು



ಮೈಸೂರಿನ ಜೆಎಸ್‌ಎಸ್ ಬಡಾವಣೆಯ 2ನೇ ಹಂತದಲ್ಲಿ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ವತಿಯಿಂದ ದಿನಾಂಕ 28.1.2023ರಂದು ಏರ್ಪಡಿಸಿದ್ದ 297ನೇ ಶಿವಾನುಭವ ಕಾರ್ಯಕ್ರಮದಲ್ಲಿ ನಿವೃತ್ತ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳಾದ ಶ್ರೀ ಬಿ.ವಿ. ಉಮಾಕಾಂತರವರು ಬಸವಾದಿ ಶರಣರ ನಡೆ-ನುಡಿ ಒಂದು ವಿಶ್ಲೇಷಣೆ ಕುರಿತು ಉಪನ್ಯಾಸ ನೀಡಿದರು. ಮೈಮುಲ್ ನಿರ್ದೇಶಕರಾದ ಶ್ರೀ ಬಿ.ಎನ್. ಸದಾನಂದರವರಿದ್ದಾರೆ.

ಅರಿವಿನ ಬಾಗಿಲು ತೆರೆಯಬೇಕಾದರೆ ಅಹಂಕಾರ ತೊರೆಯಬೇಕು ಎಂದು ನಿವೃತ್ತ ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳಾದ ಶ್ರೀ ಬಿ.ವಿ. ಉಮಾಕಾಂತರವರು ಹೇಳಿದರು.

ಮೈಸೂರಿನ ಜೆಎಸ್‌ಎಸ್ ಬಡಾವಣೆಯ 2ನೇ ಹಂತದ ಶ್ರೀಮತಿ ಬಿ.ಎಂ. ಭಾಗ್ಯಜ್ಯೋತಿ ಮತ್ತು ಶ್ರೀ ಬಿ. ವೀರಭದ್ರಪ್ಪರವರ ನಿವಾಸದಲ್ಲಿ **ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ** ವತಿಯಿಂದ ದಿನಾಂಕ 28.1.2023ರಂದು ಏರ್ಪಡಿಸಿದ್ದ 297ನೇ ಶಿವಾನುಭವ ಕಾರ್ಯಕ್ರಮದಲ್ಲಿ ಬಸವಾದಿ ಶರಣರ ನಡೆ-ನುಡಿ ಒಂದು ವಿಶ್ಲೇಷಣೆ ಕುರಿತು ಉಪನ್ಯಾಸ ನೀಡಿದರು. ಬಸವಾದಿ ಶರಣರು ಅರಿತರೆ ಶರಣ ಮರೆತರೆ ಮಾನವ ಎಂದಿದ್ದಾರೆ. ಸತ್ಯಕ್ಕೆ ತಮ್ಮನ್ನು ಅರ್ಪಿಸಿಕೊಂಡ ಅನುಭಾವಿಗಳು ಶರಣರು. ತ್ರಿವಿಧ ದಾಸೋಹದ ಮಹತ್ವ ಸಾರಿದರು. ನಡೆ-ನುಡಿಯಲ್ಲಿ ಸಾಮ್ಯತೆ ಹೊಂದಿದ್ದರು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಮೈಮುಲ್ ನಿರ್ದೇಶಕರಾದ ಶ್ರೀ ಬಿ.ಎನ್. ಸದಾನಂದರವರು ಶರಣ ಪರಂಪರೆ ನಮ್ಮ ನಾಡಿನ ಹಿರಿಮೆ. 12ನೇ ಶತಮಾನದಲ್ಲಿ ಶರಣರು ಸಮಸಮಾಜದ ನಿರ್ಮಾಣ ಮಾಡಲು ಶ್ರಮಿಸಿದರು ಎಂದರು.

ಶ್ರೀ ಸತೀಶ್ ಪ್ರಾರ್ಥಿಸಿದರು. ಶ್ರೀ ಬಿ. ವೀರಭದ್ರಪ್ಪ ಸ್ವಾಗತಿಸಿದರು. ಗಗನ್ ವಂದಿಸಿದರು. ಶ್ರೀ ಡಿ.ಎಂ. ಸಿದ್ಧಲಿಂಗಸ್ವಾಮಿ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಬಡಾವಣೆಯ ನಿವಾಸಿಗಳು, ಸಾರ್ವಜನಿಕರು ಪಾಲ್ಗೊಂಡಿದ್ದರು.

## ಸಾಧನೆ

### ಸುತ್ತೂರು ಜೆಎಸ್‌ಎಸ್ ಪ್ರೌಢಶಾಲೆ



ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಅಂಗವಾಗಿ ಸುತ್ತೂರಿನಲ್ಲಿ ನಡೆದ **ಜೆಎಸ್‌ಎಸ್ ಅಂತರ ಸಂಸ್ಥೆಗಳ** ಸಾಂಸ್ಕೃತಿಕ ಮೇಳದಲ್ಲಿ ಸಮಗ್ರ ಬಹುಮಾನವನ್ನು ಪಡೆದು ಪರ್ಯಾಯ ಪಾರಿತೋಷಕವನ್ನು ಪಡೆದ ಸುತ್ತೂರು ಜೆಎಸ್‌ಎಸ್ ಪ್ರೌಢಶಾಲೆಯ ವಿದ್ಯಾರ್ಥಿಗಳೊಂದಿಗೆ ಮುಖ್ಯೋಪಾಧ್ಯಾಯರು ಹಾಗೂ ತರಬೇತಿ ನೀಡಿದ ಶಿಕ್ಷಕರುಗಳಿದ್ದಾರೆ.

### ಜೆಎಸ್‌ಎಸ್ ಪ್ರೌಢಶಾಲೆ, ಸಿದ್ಧಾರ್ಥನಗರ



ಮೈಸೂರಿನ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖಾ ವತಿಯಿಂದ ದಿನಾಂಕ 29.12.2022ರಂದು ಏರ್ಪಡಿಸಿದ್ದ ಜಿಲ್ಲಾಮಟ್ಟದ ಅಥ್ಲೆಟಿಕ್ ಸ್ಪರ್ಧೆಯಲ್ಲಿ **ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜೆಎಸ್‌ಎಸ್ ಪ್ರೌಢಶಾಲೆಯ** 8ನೇ ತರಗತಿಯ ವಿದ್ಯಾರ್ಥಿ ಕು. ಶಶಾಂಕ್ ಚಕ್ರ ಎಸೆತ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

## ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ಬೈರಾಪುರ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಏರ್ಪಡಿಸಿದ್ದ ಮೈಸೂರು ವಿಶ್ವವಿದ್ಯಾನಿಲಯದ ಚಾಮರಾಜ ವಲಯ ಮಟ್ಟದ ಮಹಿಳಾ ಕ್ರೀಡಾಕೂಟದಲ್ಲಿ **ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನ** ವಿದ್ಯಾರ್ಥಿನಿಯರು ಭಾಗವಹಿಸಿ ಬಾಲ್‌ಬ್ಯಾಡ್ಮಿಂಟನ್ ಕ್ರೀಡೆಯಲ್ಲಿ ಪ್ರಥಮ ಸ್ಥಾನ ಪಡೆದು ಮೈಸೂರು ವಿಶ್ವವಿದ್ಯಾನಿಲಯದ ಅಂತರ್‌ವಲಯ ಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ ಹಾಗೂ ಕಬಡ್ಡಿಯಲ್ಲಿ ತೃತೀಯ ಸ್ಥಾನ ಪಡೆದಿದ್ದಾರೆ. ಪ್ರಾಂಶುಪಾಲರಾದ ಡಾ. ಎಂ. ಪ್ರಭು ಹಾಗೂ ಸಿಬ್ಬಂದಿ ವರ್ಗದವರು ಕ್ರೀಡಾಳುಗಳಿಗೆ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.



ಬಾಲ್‌ಬ್ಯಾಡ್ಮಿಂಟನ್ ಕ್ರೀಡೆಯಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿನಿಯರ ತಂಡ



ಕಬಡ್ಡಿಯಲ್ಲಿ ತೃತೀಯ ಸ್ಥಾನ ಪಡೆದ ವಿದ್ಯಾರ್ಥಿನಿಯರ ತಂಡ

## ಡಾ. ಎಚ್.ಎಸ್. ಸುಜಾತರವರಿಗೆ ಪಿಎಚ್‌ಡಿ



**ಮೈಸೂರಿನ ಸರಸ್ವತಿಪುರಂ ನಲ್ಲಿರುವ ಜೆಎಸ್ಎಸ್ ಮಹಿಳಾ ಪದವಿಪೂರ್ವ ಕಾಲೇಜಿನ ಜೀವಶಾಸ್ತ್ರ ವಿಭಾಗದಲ್ಲಿ** ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಡಾ. ಎಚ್.ಎಸ್. ಸುಜಾತರವರು ಪ್ರೊ. ಕೆ.ಎನ್. ಅಮೃತೇಶ್‌ರವರ ಮಾರ್ಗದರ್ಶನದಲ್ಲಿ ಅಧ್ಯಯನ ಮಾಡಿ ಸಲ್ಲಿಸಿದ ಇವ್ಯಾಲ್ಯುವೇಷನ್ ಆಫ್ ಎಂಡೊಫಿಟಿಕ್ ಫಂಗಿ ಫಾರ್ ದಿ ಇಂಡಕ್ಷನ್ ಆಫ್ ರೆಸಿಸ್ಟೆನ್ಸ್ ಎಗೆನೆಸ್ಟ್ ಅರ್ಲಿ ಬ್ಲೈಟ್ ಪ್ಯಾಥಜೆನ್ – ಆಲ್ಟರ್ನೇರಿಯ ಸೊಲನಿ ಇನ್ ಟೊಮ್ಯಾಟೋ ವಿಷಯದ ಪ್ರೌಢ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯವು ಅಂಗೀಕರಿಸಿ ಪಿಎಚ್‌ಡಿ ಪದವಿ ಪ್ರದಾನ ಮಾಡಿದೆ. □

## ದೆಹಲಿ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಭಾಗಿ



**ನಂಜನಗೂಡಿನ ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ** ಎನ್‌ಸಿಸಿ ಕಡೆಟ್‌ಗಳಾದ ಅಂತಿಮ ಬಿಎ ವಿದ್ಯಾರ್ಥಿ ಸೀನಿಯರ್ ಅಂಡರ್ ಆಫೀಸರ್ ಎಸ್.ಎಂ. ಹೃತ್ವಿಕ್ ಹಾಗೂ ಅಂತಿಮ ಬಿಎಸ್ಸಿ ವಿದ್ಯಾರ್ಥಿ ಜೂನಿಯರ್ ಅಂಡರ್ ಆಫೀಸರ್ ಡಿ. ಪವನ್ ಕುಮಾರ್‌ರವರುಗಳು ದಿನಾಂಕ 26.1.2023ರಂದು ದೆಹಲಿಯ ರಾಜ್‌ಪಥ್‌ನಲ್ಲಿ ನಡೆದ 74ನೇ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಭಾಗವಹಿಸಿ ಕಾಲೇಜಿಗೆ ಮತ್ತು ಸಂಸ್ಥೆಗೆ ಕೀರ್ತಿ ತಂದಿರುತ್ತಾರೆ.



ಮೈಸೂರಿನ ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಎನ್‌ಸಿಸಿ ಕೆಡೆಟ್‌ಗಳಾದ ಎಂ.ಎಸ್. ಸೂರ್ಯ, ಡಿ. ಐಶ್ವರ್ಯ, ಯು. ಜಯಶ್ರೀ, ಡಿ. ಸೌಂದರ್ಯ ಮತ್ತು ಬಿ. ಶಶಾಂಕ್‌ರವರುಗಳು ದಿನಾಂಕ 26.1.2023ರಂದು ದೆಹಲಿಯ ರಾಜಪಥ್‌ನಲ್ಲಿ ನಡೆದ ಗಣರಾಜ್ಯೋತ್ಸವ ಪರೇಡ್, ಪ್ರಧಾನಮಂತ್ರಿಗಳ ರ್‍ಯಾಲಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಕಾಲೇಜಿಗೆ ಮತ್ತು ಸಂಸ್ಥೆಗೆ ಕೀರ್ತಿ ತಂದಿರುತ್ತಾರೆ.

# ಜೆಎಸ್‌ಎಸ್ ಸಂಸ್ಥೆಗಳಲ್ಲಿ ಗಣರಾಜ್ಯೋತ್ಸವ

## ಜೆಎಸ್‌ಎಸ್ ಸಂಸ್ಥೆಗಳು, ಸುತ್ತೂರು

**ಸುತ್ತೂರಿನ ಜೆಎಸ್‌ಎಸ್ ಸಂಸ್ಥೆಗಳ ಆಶ್ರಯದಲ್ಲಿ** 74ನೆಯ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು. ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಡಾ. ಎಸ್.ಪಿ. ದಂಡಿನ್ ಧ್ವಜಾರೋಹಣ ನೆರವೇರಿಸಿ ಮಾತನಾಡುತ್ತಾ ಗಣರಾಜ್ಯೋತ್ಸವ ಕೇವಲ ಆಚರಣೆಯಾಗಬಾರದು ಪ್ರತಿಯೊಬ್ಬರ ಅನುಭವದಲ್ಲಿರಬೇಕು. ಅನುಭವವು ಅನುಭೋಗವಾಗಬೇಕು. ನಾವೆಲ್ಲ ಭಾರತೀಯರು ಒಂದೇ ತೋಟದ ಹೂಗಳಂತೆ ಸುಗಂಧ ಸೂಸಬೇಕು. ಬಸವಣ್ಣನವರ ವಚನದಂತೆ ಸಕಲ ಜೀವಿಗಳಿಗೆ ಲೇಸನ್ನು ಬಯಸುತ್ತಾ ಪ್ರತಿಯೊಂದನ್ನು ಗೌರವಿಸಿ, ಭಾರತದ ಅತ್ಯುನ್ನತ ಪ್ರಜೆಗಳಾಗಬೇಕು. ದೇಶದ ಸಂಪತ್ತು, ಆರೋಗ್ಯಯುತ ನಾಗರಿಕರು, ತನ್ನ ಆಹಾರವನ್ನು ತಯಾರಿಸಿ ಬಳಸಿ ಇತರರಿಗೂ ನೀಡುವ ಸಾಮರ್ಥ್ಯ, ಈ ಮೂರು ಅಂಶಗಳು ಒಂದು ದೇಶ ಸಂಪನ್ನವಾಗಲು ಬಹಳ ಮುಖ್ಯವಾಗಿರುತ್ತದೆ. ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳವರು ನುಡಿದಂತೆ ನಾವು ನಿಸರ್ಗದ ಒಂದು ಭಾಗ, ನಾವು ಅದನ್ನು ಪೂಜಿಸಬೇಕು, ರಕ್ಷಿಸಬೇಕು. ಸುತ್ತೂರು ವಸತಿ ಶಾಲೆಗೆ ಕಲಿಯಲು ಮತ್ತು ಕಲಿಸಲು ಬಂದಿರುವ ನೀವೇ ಪುಣ್ಯವಂತರು. ಯಾವುದೇ ಕೆಲಸ ಮೇಲಲ್ಲ, ಕೀಳಲ್ಲ. ಕಾಯಕದಲ್ಲಿ ಶ್ರದ್ಧೆ, ಪ್ರೀತಿ, ವಿಶ್ವಾಸ ಬಹಳ ಮುಖ್ಯ. ಕಾಯಕವೇ ಜೀವನದ ಮಾರ್ಗವಾಗಬೇಕು. ಡಿ.ವಿ.ಜಿಯವರು ಕಗ್ಗದಲ್ಲಿ ಹೇಳಿರುವಂತೆ ನೆನೆದು ಬಂದ ಭಾಗ್ಯವನ್ನು ಮರೆತು, ಬಾರದ್ದನ್ನು ನೆನೆದು ಮರುಗಬೇಡ. ಗುರುತಿಸು ಒಳಿತುಗಳನ್ನು, ಕೆಡಕುಗಳನ್ನು ಮರೆತು, ಬಾರದೆಂಬುದನ್ನು ಬಿಟ್ಟು ಬಂದ ಭಾಗ್ಯವನ್ನು ನೆನೆದು ಬದುಕಿದರೆ, ಜೀವನದಲ್ಲಿ ಹರುಷದಿಂದಿರಬಹುದು ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಮುಖ್ಯಸ್ಥರುಗಳಾದ ಶ್ರೀ ಸಂಪತ್ತು, ಶ್ರೀ ವೀರಭದ್ರಯ್ಯ, ಶ್ರೀಮತಿ ಹೆಚ್.ವಿ. ದಿವ್ಯಾ, ಡಾ. ಹೆಚ್.ಎಂ. ಮಹೇಶ್, ಶ್ರೀ ಎಸ್. ಶಿವಸ್ವಾಮಿ, ಶ್ರೀಮತಿ ಸುನಂದ ಭೂಪಾಳಿ, ಶ್ರೀ ಜಿ. ಶಿವಮಲ್ಲು, ಶ್ರೀ ಮ.ಗು. ಬಸವಣ್ಣ, ಶ್ರೀಮತಿ ಸಿ.ಪಿ. ನಿರ್ಮಲ, ಶ್ರೀ ಜಿ.ಎಂ. ಷಡಕ್ಷರಿ, ಶ್ರೀ ಮಹದೇವಪ್ರಸಾದ್, ಶ್ರೀ ಎಂ. ಷಡಕ್ಷರಿ ಹಾಗೂ ಶ್ರೀಮತಿ ಪಿ. ಸುಶೀಲ ಉಪಸ್ಥಿತರಿದ್ದರು.



ಸುತ್ತೂರು ಜೆಎಸ್‌ಎಸ್ ಸಂಸ್ಥೆಗಳಲ್ಲಿ ನಡೆದ 74ನೆಯ ಗಣರಾಜ್ಯೋತ್ಸವದಲ್ಲಿ ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಡಾ. ಎಸ್.ಪಿ. ದಂಡಿನ್‌ರವರು ಧ್ವಜಾರೋಹಣ ನೆರವೇರಿಸಿದರು.

ವಿದ್ಯಾರ್ಥಿಗಳಾದ ಪ್ರಜ್ವಲ್, ಕು. ಸಂಜನ, ರಂಗಸ್ವಾಮಿ, ಗಣರಾಜ್ಯೋತ್ಸವ ಕುರಿತು ಭಾಷಣ ಮಾಡಿದರು. ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಕು. ಹೆಚ್.ಎಂ. ಸವಿತಾ ಸ್ವಾಗತಿಸಿದರು. ಶ್ರೀ ಎಂ. ನಾಗೇಶ್ ವಂದಿಸಿದರು. ಶ್ರೀಮತಿ ಜಿ.ಎಸ್. ಜಗದಾಂಬಿಕ ನಿರೂಪಿಸಿದರು.

## ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಮಾಲೂರು



**ಮಾಲೂರಿನ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಮುಚ್ಚಯದಲ್ಲಿ** ದಿನಾಂಕ 26.1.2023ರಂದು 74ನೆಯ ಗಣರಾಜ್ಯೋತ್ಸವ ಸಮಾರಂಭವನ್ನು ಆಚರಿಸಲಾಯಿತು.

ಮಾಲೂರಿನ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಂಯೋಜನಾಧಿಕಾರಿಗಳು, ಗಣ್ಯರು ಹಾಗೂ ವಿಭಾಗಗಳ ಮುಖ್ಯಸ್ಥರುಗಳು ಧ್ವಜಾರೋಹಣ ನೆರವೇರಿಸಿ ಧ್ವಜಗೀತೆ, ರಾಷ್ಟ್ರಗೀತೆ, ವಂದೇ ಮಾತರಂ ಗೀತೆಗಳನ್ನು ಹಾಡಿದರು. ಜೆಎಸ್‌ಎಸ್ ಸಂಸ್ಥೆಯ ಗಾಯತ್ರಿ ಪ್ರೌಢಶಾಲೆ ಮತ್ತು ಪಬ್ಲಿಕ್ ಶಾಲೆ ಮಕ್ಕಳು ಪಥಸಂಚಲನದ ಮೂಲಕ ಧ್ವಜಕ್ಕೆ ಗೌರವ ವಂದನೆ ಸಲ್ಲಿಸಿದರು.

ಸಹ ಶಿಕ್ಷಕರಾದ ಶ್ರೀ ಜೆ.ಇ. ಬಸವರಾಜಪ್ಪ ಮಾತನಾಡುತ್ತಾ 15 ಆಗಸ್ಟ್ 1947 ಬ್ರಿಟಿಷರ ದಾಸ್ಯದಿಂದ ಮುಕ್ತಿಹೊಂದಿ ತಾತ್ವಿಕವಾಗಿ ಸ್ವಾತಂತ್ರ್ಯ ಪಡೆದ ದಿನವಾದರೆ, 26 ಜನವರಿ 1950 ಭಾರತ ಸಂವಿಧಾನ ಜಾರಿಗೊಳಿಸಿದ ದಿನ. ರಾಜಪ್ರಭುತ್ವವನ್ನು ತ್ಯಜಿಸಿ ಪ್ರಜಾಪ್ರಭುತ್ವದಲ್ಲಿ ತನ್ನ ನಿಜ ಅಸ್ತಿತ್ವವನ್ನು ಸ್ಥಾಪಿಸಿದ ಮಹತ್ವದ ದಿನವಾಗಿದೆ. ಭಾರತ ಸಂವಿಧಾನ ರಚನಾ ಕಾರ್ಯದಲ್ಲಿ ಡಾ. ಬಾಬು ರಾಜೇಂದ್ರ ಪ್ರಸಾದ್ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ನೇತೃತ್ವದ ಕರಡು ಸಮಿತಿಯು ಸಮರ್ಪಕವಾಗಿ ಕಾರ್ಯ ನಿರ್ವಹಿಸಿತು. ಮೂಲಭೂತ ಹಕ್ಕು, ಕರ್ತವ್ಯಗಳು ಹಾಗೂ ರಾಜ್ಯ ನಿರ್ದೇಶಕ ತತ್ವಗಳನ್ನೊಳಗೊಂಡ ಬೃಹತ್ ಲಿಖಿತ ಸಂವಿಧಾನ ರಚಿಸಿದ ಕೀರ್ತಿ ಡಾ. ಬಿ.ಆರ್. ಅಂಬೇಡ್ಕರ್‌ರವರಿಗೆ ಸಲ್ಲುತ್ತದೆಂದು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಪ್ರಣವ್ ಮತ್ತು ತಂಡದವರು ದೇಶಭಕ್ತಿ ಗೀತೆಯನ್ನು ಹಾಡಿದರು. ಸಂಸ್ಥೆಯ ವಿದ್ಯಾರ್ಥಿಗಳು ಕನ್ನಡ, ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳಲ್ಲಿ ಗಣರಾಜ್ಯೋತ್ಸವ ಕುರಿತು ಮಾತನಾಡಿದರು. ಸುತ್ತೂರು ಜಾತ್ರಾ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ವಿಜೇತರಾದ ನಾಲ್ಕು ವಿಭಾಗಗಳ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಚಾಂಪಿಯನ್ ಟ್ರೋಫಿ ಪಡೆದ ಪಬ್ಲಿಕ್ ಶಾಲಾಮಕ್ಕಳಿಗೆ ಅಭಿನಂದಿಸಲಾಯಿತು.

ಶ್ರೀ ಎಸ್.ಹೆಚ್. ಮಹೇಶ್ವರಪ್ಪರವರು ಅಧ್ಯಕ್ಷತೆ ವಹಿಸಿ, ದೆಹಲಿಯಲ್ಲಿ ಜರುಗುತ್ತಿರುವ ಗಣರಾಜ್ಯೋತ್ಸವ ಸಮಾರಂಭದಲ್ಲಿ ಪಬ್ಲಿಕ್ ಶಾಲೆಯ ಎನ್‌ಸಿಸಿ ವಿದ್ಯಾರ್ಥಿ ಈಶ್ವರ್‌ರವರು ಪಥಸಂಚಲನೆಯಲ್ಲಿ ಭಾಗವಹಿಸುತ್ತಿರುವುದಕ್ಕೆ ಸಂಸ್ಥೆಯ ಪರವಾಗಿ ಅಭಿನಂದಿಸಿದರು.

ಜೆಎಸ್‌ಎಸ್ ಗಾಯತ್ರಿ ಹಿರಿಯ ಪ್ರಾಥಮಿಕ ಶಾಲೆಯು ಜಿಲ್ಲಾ ಮಟ್ಟದ ಸ್ವಚ್ಛ ವಿದ್ಯಾಲಯ ಪುರಸ್ಕಾರಕ್ಕೆ ಆಯ್ಕೆಯಾಗಿರುವುದಕ್ಕೆ ಪ್ರಶಂಸಿಸಲಾಯಿತು. ವಿದ್ಯಾರ್ಥಿಗಳಾದ ಶ್ರೇಯಸ್ ಮತ್ತು ತಂಡದವರು ಪ್ರಾರ್ಥಿಸಿದರು. ಶಿಕ್ಷಕರಾದ ಶ್ರೀ ಎಂ. ನಂಜುಂಡಸ್ವಾಮಿ ಸ್ವಾಗತಿಸಿದರು. ಶ್ರೀಮತಿ ಮೈನಾ ನಿರೂಪಿಸಿದರು. ಶ್ರೀ ಕೆ.ಎಸ್. ಗಿರೀಶ್ ಕುಮಾರ್ ವಂದಿಸಿದರು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಶ್ರೀ ಗೌರಿಶಂಕರ್, ಶ್ರೀ ಮುನಿಕೃಷ್ಣಪ್ಪ, ಮುಖ್ಯ ಶಿಕ್ಷಕರಾದ ಶ್ರೀ ವೆಂಕಟೇಶ್‌ರವರು ಹಾಗು ಶ್ರೀ ಚಂದ್ರಶೇಖರ್ ಆರಾಧ್ಯ ಮತ್ತು ಸಂಸ್ಥೆಯ ಬೋಧಕ, ಬೋಧಕೇತರ ವರ್ಗದವರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಜೆಎಸ್‌ಎಸ್ ಕಾಲೇಜು, ಊಟಿ ರಸ್ತೆ, ಮೈಸೂರು



ಭಾರತದಲ್ಲಿ ಹಲವು ಧರ್ಮ, ಜಾತಿ, ಜನಾಂಗ, ಭಾಷೆಗಳು ಇದ್ದು ಹಲವು ಸವಾಲುಗಳು ಇದ್ದರೂ ಪ್ರಜಾಪ್ರಭುತ್ವವನ್ನು ಪರಿಣಾಮಕಾರಿಯಾಗಿ ಅಳವಡಿಸಿಕೊಂಡು ಯಶಸ್ವಿಯಾಗಿದ್ದೇವೆ. ಇದು ನಮ್ಮ ಭಾರತೀಯರ ಮತ್ತು ಭಾರತದ ಸಂವಿಧಾನದ ವಿಶೇಷವಾಗಿದೆ ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾನೂನು ವಿಭಾಗದ ಡಾ. ಎಸ್.ಎಸ್. ಜಾಹ್ನವಿ ಅವರು ಹೇಳಿದರು.

**ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಾಲೇಜಿನಲ್ಲಿ** ನಡೆದ 74ನೆಯ ಗಣರಾಜ್ಯೋತ್ಸವ ದಿನಾಚರಣೆಯ ಮುಖ್ಯ ಅತಿಥಿಗಳಾಗಿ ಆಗಮಿಸಿ ಸಂವಿಧಾನ ರಚನೆಯ ಹಿನ್ನೆಲೆ ಮತ್ತು ಇತಿಹಾಸವನ್ನು ವಿವರಿಸುತ್ತಾ ಅವರು ಮಾತನಾಡಿದರು. ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆ ಶ್ರೇಷ್ಠವಾಗಿದೆ. ನಮ್ಮ ಹಕ್ಕುಗಳು, ಕರ್ತವ್ಯಗಳು, ಕಾನೂನುಗಳು, ನಮ್ಮ ವ್ಯವಹಾರಗಳು ಮತ್ತು ನಮ್ಮ ನಡವಳಿಕೆಯ ಬಗ್ಗೆ ನಮಗೆ ಅರಿವು ಮತ್ತು ಎಚ್ಚರವಿರಬೇಕು. ನಮ್ಮ ಹಕ್ಕುಗಳನ್ನು ನಾವೇ ರಕ್ಷಿಸಿಕೊಳ್ಳಬೇಕು. ಇದನ್ನು ರಕ್ಷಿಸಿಕೊಳ್ಳುವುದಕ್ಕೆ ಮೌಲ್ಯಯುತವಾದ ಶಿಕ್ಷಣ ಬೇಕು. ಮೌಲ್ಯಯುತವಾದ ಶಿಕ್ಷಣ ನೀಡದೆ ಸದೃಢವಾದ ಗುಣಮಟ್ಟದ ಸಮಾಜವನ್ನು ಕಟ್ಟುವುದು ಅಸಾಧ್ಯ. ಪ್ರತಿ ವ್ಯಕ್ತಿಯಲ್ಲಿಯೂ ಒಂದು ವಿಶಿಷ್ಟವಾದ ಮೌಲ್ಯಯುತ ವ್ಯಕ್ತಿತ್ವವನ್ನು ಶಿಕ್ಷಣ ಕಟ್ಟಬೇಕು. ವಿದ್ಯಾರ್ಥಿಗಳನ್ನು ಎಲ್ಲ ರೀತಿಯಲ್ಲಿಯೂ ಸದೃಢರಾಗಿಸಬೇಕು. ಇದರಿಂದ ದೇಶವು ಆಂತರಿಕವಾಗಿ ಸದೃಢಗೊಳ್ಳುತ್ತದೆ ಎಂದರು.

ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಧ್ವಜಾರೋಹಣವನ್ನು ನೆರವೇರಿಸಿದರು. ಪದವಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಂ.ಪಿ. ವಿಜಯೇಂದ್ರ ಕುಮಾರ್ ಸ್ವಾಗತಿಸಿದರು. ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಸ್. ಸೋಮಶೇಖರ್ ವಂದಿಸಿದರು. ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಲೆ. ಡಾ. ಎಲ್. ವಿನಯ್‌ಕುಮಾರ್ ನಿರೂಪಿಸಿದರು. ವಿದ್ಯಾರ್ಥಿನಿ ಕು. ಎಂ. ಸಂಧ್ಯಾ ಮತ್ತು ಕು. ಎಂ.ಸಿ. ರೇಖಾಶ್ರೀ ಪ್ರಾರ್ಥಿಸಿದರು.

## ಜೆಎಸ್‌ಎಸ್ ವೈದ್ಯಕೀಯ ಶಿಕ್ಷಣ ಸಂಸ್ಥೆಗಳು, ಮೈಸೂರು

**ಮೈಸೂರಿನ ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್, ಕಾಲೇಜ್ ಆಫ್ ನರ್ಸಿಂಗ್, ವಾಕ್ ಮತ್ತು ಶ್ರವಣ ಸಂಸ್ಥೆ** ಹಾಗು **ಕಾಲೇಜ್ ಆಫ್ ಫಿಜಿಯೋಥೆರಪಿಗಳ ಸಂಯುಕ್ತಾಶ್ರಯದಲ್ಲಿ** ದಿನಾಂಕ 26.1.2023ರಂದು 74ನೇ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆಯ ನಿರ್ದೇಶಕರಾದ ಡಾ. ಎನ್.ಪಿ. ನಟರಾಜ್‌ರವರು ಧ್ವಜಾರೋಹಣ ನೆರವೇರಿಸಿ ಮಾತನಾಡಿ ಸಂವಿಧಾನ ರಚನೆ ಹಾಗು ಇತಿಹಾಸವನ್ನು ನಾವು ಅರಿಯಬೇಕು. ಸ್ವಾತಂತ್ರ್ಯ ಹೋರಾಟಗಾರರಾದ

ಗಾಂಧೀಜಿ, ಸುಭಾಷ್‌ಚಂದ್ರ ಬೋಸ್ ಹಾಗು ಇತರರನ್ನು ಸದಾ ಸ್ಮರಿಸಬೇಕು. ನಮ್ಮೆಲ್ಲರಿಗೂ ಕಾನೂನು ಕ್ರಮಗಳಡಿಯಲ್ಲಿ ರಕ್ಷಣೆಯನ್ನು ಒದಗಿಸಲು ಅನುಕೂಲ ಮಾಡಿಕೊಟ್ಟಂತಹ ಎಲ್ಲಾ ನಾಯಕರು ಹಾಗು ಸಂವಿಧಾನಶಿಲ್ಪಿಗಳಾದ ಡಾ. ಬಿ.ಆರ್. ಅಂಬೇಡ್ಕರ್‌ರವರನ್ನು ಸದಾ ಸ್ಮರಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಫಿಜಿಯೋಥೆರಪಿ ಕಾಲೇಜು ಹಾಗು ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆಯ ವಿದ್ಯಾರ್ಥಿಗಳು ದೇಶಭಕ್ತಿಗೀತೆಗಳನ್ನು ಪ್ರಸ್ತುತಪಡಿಸಿದರು. ಜೆಎಸ್‌ಎಸ್ ಫಿಸಿಯೋಥೆರಪಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಕವಿತ ರಾಜ್, ಜೆಎಸ್‌ಎಸ್ ಕಾಲೇಜ್ ಆಫ್ ನರ್ಸಿಂಗ್‌ನ ಪ್ರಾಂಶುಪಾಲರಾದ ಶ್ರೀಮತಿ ಎಂ.ಕೆ. ಅಶ್ವತಿದೇವಿ, ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್‌ನ ಪ್ರಾಂಶುಪಾಲರಾದ ಶ್ರೀಮತಿ ಡಿ.ಎನ್. ರೇಣುಕಾದೇವಿ, ಎಲ್ಲಾ ಅಂಗಸಂಸ್ಥೆಯ ಬೋಧಕ ಮತ್ತು ಬೋಧಕೇತರ ವರ್ಗದವರು ಹಾಗು ವಿದ್ಯಾರ್ಥಿಗಳು ಉಪಸ್ಥಿತರಿದ್ದರು

## ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು. ಕೊಳ್ಳೇಗಾಲ

**ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ದಿನಾಂಕ 26.1.2023ರಂದು 74ನೇ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು.

ಸಾಮಾಜಿಕ ಕಾರ್ಯಕರ್ತರಾದ ಶ್ರೀ ಮಹಿಪಾಲರವರು ಧ್ವಜಾರೋಹಣ ನೆರವೇರಿಸಿ ಮಾತನಾಡುತ್ತಾ ಭಾರತವನ್ನು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಎಲ್ಲರೂ ಆಳ್ವಿಕೆ ಮಾಡಿ ಜೊತೆಗೆ ಸಂಪತ್ತನ್ನು ದೋಚಿದರೂ ಕೂಡ ಇಂದಿಗೂ ಭಾರತವು ಭೌಗೋಳಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಸಂಪದ್ಭರಿತ ರಾಷ್ಟ್ರವಾಗಿದೆ. ಇದಕ್ಕೆ ನಮ್ಮ ಹಿರಿಯರು ಅನುಸರಿಸಿರುವ ಆರ್ಥಿಕ ನೀತಿಗಳೇ ಕಾರಣವಾಗಿವೆ. ಹಾಗೆಯೇ ಪ್ರತಿಯೊಬ್ಬ ಭಾರತೀಯನೂ ಸಹ ದಿನದ 24 ಗಂಟೆಯಲ್ಲಿ 30 ನಿಮಿಷವನ್ನು ರಾಷ್ಟ್ರಕ್ಕೋಸ್ಕರ ಮೀಸಲಿಡುವುದರ ಮೂಲಕ ರಾಷ್ಟ್ರದ ಏಳ್ಗೆಗೆ ಸಹಕರಿಸಬೇಕು ಮತ್ತು ತಾರತಮ್ಯ ರಹಿತ ಸಮ ಸಮಾಜವನ್ನು ನಿರ್ಮಾಣ ಮಾಡಬೇಕು. ಇದೇ ಸಂವಿಧಾನದ ಆಶಯ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ಡಾ. ಎಂ. ಪ್ರಭು ಮಾತನಾಡಿ ಸಂವಿಧಾನವು ಸಮಾಜದ ಪ್ರತಿಯೊಬ್ಬ ವ್ಯಕ್ತಿಯ ವ್ಯಕ್ತಿತ್ವದ ವಿಕಸನಕ್ಕೆ ಸಹಕಾರಿಯಾಗಿದೆ ಎಂದರು. ಜೆಎಸ್‌ಎಸ್ ಮಹಿಳಾ ಕಾಲೇಜು ಹಾಗೂ ನರ್ಸಿಂಗ್ ಶಾಲೆಯ ವಿದ್ಯಾರ್ಥಿನಿಯರು ಗಣತಂತ್ರವನ್ನು ಕುರಿತು ಭಾಷಣ ಮಾಡಿದರು. ನರ್ಸಿಂಗ್ ಶಾಲೆಯ ಪ್ರಾಂಶುಪಾಲರಾದ ಶ್ರೀ ಹೇಮೇಶ್‌ಮೂರ್ತಿ, ಜೆಎಸ್‌ಎಸ್ ಬಾಲಕಿಯರ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎನ್. ಮಹದೇವಸ್ವಾಮಿ, ಬೋಧಕ–ಬೋಧಕೇತರರು, ಎಲ್ಲಾ ವಿದ್ಯಾರ್ಥಿನಿಯರು ಹಾಜರಿದ್ದರು. ಉಪನ್ಯಾಸಕರಾದ ಶ್ರೀಮತಿ ಜಯಶ್ರೀ ಕಾರ್ಯಕ್ರಮ ನಿರೂಪಿಸಿದರು.

## ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಕೋಣನಕುಂಟೆ, ಬೆಂಗಳೂರು

**ಬೆಂಗಳೂರಿನ ಕೋಣನಕುಂಟೆಯ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳಲ್ಲಿ** ಗಣರಾಜ್ಯೋತ್ಸವನ್ನು ಆಚರಿಸಲಾಯಿತು. ಪ್ರೌಢಶಾಲಾ ಮುಖ್ಯಸ್ಥರಾದ ಶ್ರೀಮತಿ ರೆಹನಾ ಬೇಗಂ ಧ್ವಜಾರೋಹಣ ನೆರವೇರಿಸಿದರು. ಪ್ರಾಥಮಿಕ ಶಾಲಾ ಮುಖ್ಯಸ್ಥರಾದ ಶ್ರೀ ಕುಮಾರಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿ ರಾಜಪ್ರಭುತ್ವ ವ್ಯವಸ್ಥೆಯಿಂದ ಉಂಟಾಗುತ್ತಿದ್ದ ಆಂತರಿಕ ಬಿಕ್ಕಟ್ಟುಗಳು ನಿರ್ಮೂಲನೆಯಾಗಿ ವ್ಯವಸ್ಥಿತವಾದ ಆಡಳಿತ ಮಾರ್ಗ ದೊರೆಯಲೆಂಬ ಕಾರಣಕ್ಕಾಗಿ ಇಡೀ ರಾಷ್ಟ್ರವನ್ನು ವಿಲೀನಗೊಳಿಸಲಾಯಿತು. ಅದರ ಬೆನ್ನೆಲುಬಿಗಾಗಿ ಸಂವಿಧಾನದ ರಚನೆಯಾಗಿ ಜಾರಿಗೆ ಬಂತೆಂಬುದನ್ನು ತಿಳಿಸಿಕೊಡುವುದೇ ಇಂದಿನ ದಿನದ ಮಹತ್ವವಾಗಿದೆ ಎಂದರು.

ಶಿಕ್ಷಕರಾದ ಶ್ರೀ ಎಸ್.ಎ. ವೇದಮೂರ್ತಿಯವರು ಸ್ವಾತಂತ್ರ್ಯಾನಂತರದ ಭಾರತದ ನಿರ್ಮಾಣಕ್ಕಾಗಿ ನಮಗೆ ಗಣತಂತ್ರದ ಅವಶ್ಯಕತೆ ಅನಿವಾರ್ಯವೆನಿಸಿತು. ತನ್ಮೂಲಕ ಎಲ್ಲಾ ರೀತಿಯಲ್ಲೂ ಎಲ್ಲರಿಗೂ ನ್ಯಾಯವನ್ನೊದಗಿಸಿ ಕೊಡಲು ಸಂವಿಧಾನದ ಅನ್ವಯ, ಅನುಪಾಲನೆಯು ಜಾರಿಯಾಯಿತು. ನಾವು ಅದರ ಮಹತ್ವವನ್ನರಿತು ಮುನ್ನಡೆಯಬೇಕೆಂದು ವಿದ್ಯಾರ್ಥಿಗಳಿಗೆ ಕರೆಕೊಟ್ಟರು.

ಸುತ್ತೂರು ಜಾತ್ರಾ ಮಹೋತ್ಸವದ ವಿವಿಧ ವಿಭಾಗದ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ, ಪ್ರಶಂಸಾ ಪತ್ರಗಳನ್ನು ನೀಡಿ ಅಭಿನಂದಿಸಲಾಯಿತು. ವಿದ್ಯಾರ್ಥಿ ಸಂಘದ ಕಾರ್ಯದರ್ಶಿಗಳು ಕಾರ್ಯಕ್ರಮ ನಿರ್ವಹಿಸಿದರು.

## ಶ್ರದ್ಧಾಂಜಲಿ



ಜೆಎಸ್‌ಎಸ್ ಮಹಾವಿದ್ಯಾಪೀಠದ ಪತ್ರಾಗಾರ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶ್ರೀಮತಿ ಸುವರ್ಣಮ್ಮನವರು ದೈವಾಧೀನರಾದ ಹಿನ್ನೆಲೆಯಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ, ವಿಭಾಗಗಳ ಮುಖ್ಯಸ್ಥರು, ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಪತ್ರಾಗಾರ ಶಾಖೆಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಸೇವೆ ಸಲ್ಲಿಸುತ್ತಿದ್ದ ಶ್ರೀಮತಿ ಸುವರ್ಣಮ್ಮನವರು ದಿನಾಂಕ 16.1.2023ರಂದು ದೈವಾಧೀನರಾದರು. ಈ ಹಿನ್ನೆಲೆಯಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಪ್ರಕಟಣ ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನರವರು ಮಾತನಾಡುತ್ತಾ ಶ್ರೀಮತಿ ಸುವರ್ಣಮ್ಮನವರು 16 ವರ್ಷಕ್ಕು ಹೆಚ್ಚು ಕಾಲ ವಿಭಾಗದಲ್ಲಿ ಸೇವೆ ಸಲ್ಲಿಸಿದ್ದಾರೆ. ಅವರು ಎಲ್ಲರೊಡನೆ ಪ್ರೀತಿ–ವಿಶ್ವಾಸದಿಂದ ನಡೆದುಕೊಳ್ಳುತ್ತಿದ್ದರು. ಯಾರ ಮೇಲೆ ಎಂದೂ ಬೇಸರಪಟ್ಟುಕೊಂಡವರಲ್ಲ. ಗೊತ್ತಿಲ್ಲದುದನ್ನು ಬೇರೆಯವರಿಂದ ಕೇಳಿ ತಿಳಿದುಕೊಳ್ಳುತ್ತಿದ್ದರು. ಅವರು ಮಾಡಿದ ಕೆಲಸಗಳು ಸದಾ ನೆನಪಿನಲ್ಲಿ ಉಳಿಯುತ್ತವೆ ಎಂದು ತಿಳಿಸಿದರು.

ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ, ಶ್ರೀ ಕೆ.ಆರ್. ಸಂತಾನಂ, ಶ್ರೀ ನಗರ್ಲೆ ಶಿವಕುಮಾರರವರುಗಳು ಶ್ರೀಮತಿ ಸುವರ್ಣಮ್ಮನವರ ಕುರಿತು ಮಾತನಾಡಿದರು.

ದಿವಂಗತರ ಆತ್ಮಕ್ಕೆ ಶಾಂತಿ ಕೋರಿ ಮೌನಾಚರಣೆ ಮಾಡಲಾಯಿತು. ಜೆಎಸ್‌ಎಸ್ ಮಹಾವಿದ್ಯಾಪೀಠದ ಎಲ್ಲ ವಿಭಾಗಗಳ ಮುಖ್ಯಸ್ಥರು, ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.



ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ತೆಪ್ಪೋತ್ಸವದಂದು ನಡೆದ ಕಪಿಲಾ ಆರತಿ (20 ಜನವರಿ 2023)




ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ 6.1.2023ರಂದು ನಡೆದ 250ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ತ್ರಿಚೂರ್ ಸಹೋದರರಾದ ವಿದ್ವಾನ್ ಕೃಷ್ಣ ಮೋಹನ್ ಮತ್ತು ವಿದ್ವಾನ್ ರಾಮ್‌ಕುಮಾರ್ ಮೋಹನ್ ದ್ವಂದ್ವ ಗಾಯನ ಪ್ರಸ್ತುತಿ ಪಡಿಸಿದರು. ಪಕ್ಕವಾದ್ಯದಲ್ಲಿ ವಿದ್ವಾನ್ ತ್ರಿಚೂರ್ ಮೋಹನ್, ವಿದ್ವಾನ್ ಜಿ. ಸುರೇಶ್ ಹಾಗೂ ವಿದ್ವಾನ್ ವಿಶ್ವೇಶ್ ಚಂದ್ರಶೇಖರ್‌ರವರುಗಳಿದ್ದಾರೆ

# JSS IS&H Graduation Day Held




**JSS Institute of Speech and Hearing, Mysuru** celebrated its Graduation Day at Sri Rajendra Centenary Auditorium, JSS Hospital on 29.12.2022. Dr. Prathima Murthy, Director, NIMHANS, Bengaluru was the Chief Guest. Sri R. Mahesh, Director, Medical Education Division, JSS Mahavidyapeetha was the Guest of Honour. Dr. C.G. Betsurmath, Executive Secretary, JSS MVP presided over the function. Dr. N.P. Nataraja, Director of the Institute, and Dr. R. Suma, Principal were also present.

Invocation song was sung by the students followed by lighting of the lamp by the Chief Guest. The welcome speech was delivered by Dr. N.P. Nataraja. The Oath of Professional Ethics was administered to the graduates through which they were asked to honour and uphold the dignity of the profession.

The Annual Report was presented by the Principal. The report highlighted that the institute was awarded a 'GOLD' Rating by QS-I GAUGE, a rating system for Indian colleges and universities. Details regarding the number of national and International webinars conducted in the academic year, research activities such as research articles published, the number of projects sanctioned, public education programs conducted, and awards won at cultural events were also highlighted.

The Chief Guest presented the awards for the Best Outgoing Student, Best Clinician of the Year, and to the students who scored highest marks in BASLP and MALSP degrees. 39 graduates received their graduate certificates and 38 received their post-graduate certificates.

Dr. Prathima Murthy, in her address, emphasized the increasing demand for speech and hearing professionals and appreciated the JSS Mahavidhyapeetha for its noteworthy service in providing more

human resources to the various fields of science by establishing educational institutions across the country. She also stressed the fact that prevention of disorders by spreading awareness in society was a vital part of our discipline.

Sri R. Mahesh congratulated the new graduates and motivated them to serve as excellent clinicians. He also congratulated parents and teachers for the wonderful achievements of their wards. He also noted that the progress achieved by the Institute would definitely pave way for JSS Mahavidyapeetha to have many more sister-institutions.

Dr. C.G. Betsurmath, in his presidential address, congratulated the graduates and called upon them to use their skill sets to the welfare of the society. He also urged the graduates to always strive for excellence and quoted that "excellence needs to be a habit", and, concluded his speech by asking them to be actively involved in learning newer things.

Details of the awardees, medalists and prize winners are as follows :

| Sl. No | Award | Name |
|---|---|---|
| 1 | H.H. Dr. Sri Shivarathri Rajendra Mahaswamiji Award for the Highest Marks secured: UG | Ms. Aditi M. Rao |
| 2 | H.H. Dr. Sri Shivarathri Rajendra Mahaswamiji Award for the Best Student Clinician: UG | Ms. D. Divyashree |
| 3 | H.H. Dr. Sri Shivarathri Rajendra Mahaswamiji Award for the best outgoing student: UG | Ms. B.S. Swathi |
| 4 | H.H. Dr. Sri Shivarathri Rajendra Mahaswamiji Award for the Best Outgoing Student: PG Audiology | Sri G. Jeevan |
| 5 | H.H. Dr. Sri Shivarathri Rajendra Mahaswamiji Award for the Highest Marks secured: PG Audiology | Ms. Varsha Chowdhari |
| 6 | H.H. Dr. Sri Shivarathri Rajendra Mahaswamiji Award for the Best Student Clinician: PG Audiology | Ms. C.M. Bhoomika |
| 7 | H.H. Dr. Sri Shivarathri Rajendra Mahaswamiji Award for the Highest Marks secured: PG Speech - Language Pathology | Sri Ravi Patel |
| 8 | H.H. Dr. Sri Shivarathri Rajendra Mahaswamiji Award for PG Speech - Language Pathology | Ms. G. Anitha |

| | | |
|---|---|---|
| 9 | H.H. Dr. Sri Shivarathri Rajendra Mahaswamiji Award for the best outgoing student: PG Speech - Language Pathology | Ms. Jesty Rajan |
| 10 | H.H. Dr. Sri Shivarathri Rajendra Mahaswamiji Award for the Highest Marks secured: PG MASLP | Ms. Ripsy Lorance |
| 11 | H.H. Dr. Sri Shivarathri Rajendra Mahaswamiji Award for the Best Student Clinician: PG MASLP | Ms. D.G. Rashmi |
| 12 | H.H. Dr. Sri Shivarathri Rajendra Mahaswamiji Award for the Best Outgoing Student: PG MASLP | Ms. K.K. Roshni |

Sri K.R. Puneeth and Ms. Gagana Natesh shared their happy experiences during college day and learnings and assured to uphold the dignity of the institute wherever they are.

Vote of thanks was delivered by Dr. M.K. Niharika, Assistant Professor of the Institute. The program ended with high tea arranged for students and parents.

## Essay Writing Competition



An Inter-School Essay Writing Competition in Kannada and English Languages was held at **JSS Public School, JSSTI's Campus, Mysuru**, on 3.12.2022. 37 students from 19 schools participated in the competition.

The School Head Boy compered the programme. The School Head Girl welcomed the gathering followed by lighting of the lamp. Smt. Manikarnika Soujanya gave the details of the competition. Light snacks were provided to the accompanying teachers and the participants.

Participation Certificates were issued to all the participants. A group photograph was taken at the end. The prizes for the winners will be given at the Annual day celebration.

# JSS Dental College & Hospital, Mysore



## CDE Program Held

Micro-dentistry is a modern and less-invasive approach to dental care, which aims to preserve the tooth structure and conserve tissue while minimizing the risks and reducing healing time. The Department of Conservative Dentistry & Endodontics, **JSS Dental College & Hospital, Mysuru** organized a CDE programme on "RETREAT, REPAIR & RETRIEVE - MICRO ENDO WORKFLOW" on 2nd and 3rd Dec. 2022. The Resource Faculty of the CDE Program was Dr. Narasimhan Bharadwaj, Professor, Savitha Dental College & Hospital, Chennai. The inauguration was held on 2.12.2022. The Chief Guest Dr. Surinder Singh, Vice-Chancellor, JSS AHER opined that there was a need to explore new technologies that can enhance the clinical outcome for the patients. The two-day workshop comprised a lecture by Dr. Narasimhan Bharadwaj who spoke in detail about micro-endodontics, showed clinical pictures and videos demonstrating newer techniques of instrument retrieval. About 52 participants had enrolled to the lecture and hands-on program. The hands-on workshop comprised participants from Rajiv Gandhi Dental College & Hospital and Yenepoya Dental College & Hospital, Mangalore, and some private practitioners. The sponsors of the workshop was Dentsply Sirona & Zeiss.

***

## Student Scientific Convention


The Dental Education Unit of **JSS Dental College and Hospital**, organized a three-day Student Scientific Convention - 2022 with the theme "Curating Innovations in Scientific Research and Clinical Techniques" from 8th-10th Dec. 2022. Pre-clinical hands-on workshops were conducted to train over 90 future clinicians with valuable skills required for today's aesthetic and implant dentistry.

The first day of the convention featured the inaugural ceremony followed by scientific paper and e-poster presentations




from about 200 participants. On the second day, hands-on preclinical workshops were conducted for the benefit of the participants. Pre-clinical Workshop on "Clinical Approach to Advanced Implants" was led by Dr. Ravindra Savadi who gave participants a much-needed insight into the placement of implants. Dr. Santosh Ravindran conducted the workshop on "Materials and Concepts of Teeth Whitening" wherein he gave a live on-patient demonstration of the latest techniques in whitening the teeth. The convention was concluded with an extensive workshop on "Veneers: Impeccable Laminate Restoration for Today's Restorative Practices", was conducted by Dr. Rohit Shetty.

## Workshop from Special Interest Group




Special Interest Group - Quality and Safe Use of Dental Materials, in association with the Dental Education Unit, organized a hands-on workshop on "Materials and Concepts of Teeth Whitening" on 9.12.2022. Dr. Santosh Ravindran, an entrepreneur from Mumbai was the Resource Faculty, who shared his knowledge and experience

with the undergraduates and postgraduates students on teeth whitening. The program was supported by FGM Dental Products and Mix Pac Products. Dr. Santosh Ravindran gave comprehensive details on the use of teeth-whitening materials. The participants were provided with materials for hands-on experience. The teeth-whitening materials provided by the FGM Dental Products will be taken up for further research, with other external members of SIG.

## Guest Lecture Organized



Dr. Emilio Nuzzolese, Researcher & Professor of Legal Medicine and Adjunct Faculty of JSSAHER delivered an insightful Guest Lecture on "Medical Child Abuse and Altered Parenting Recognition in the Dental Clinic" for the students of M.Sc., Forensic Odontology and the students of Online Certificate Course in Dental Ethics & Jurisprudence, on 30.12.2022 through zoom online platform.

## Faculty Achievements



Dr. K.P. Mahesh, Reader, Department of Oral Medicine & Radiology received Second Prize for his Paper titled "Biopsychosocial Model for Pain Management In Post-Cancer Therapy Patients : An Evaluation Study" presented at the 33rd National Conference held at Bhubaneswar.

Dr. S. Sowmya, Lecturer, Department of Prosthodontics and Crown & Bridge was conferred Dr. C. Shamasundar Award for

Best Research in Human Values, by the "MINDS UNITED FOR HEALTH SCIENCES & HUMANITY" Trust, funded by Infosys Foundation, for the year 2022-23 for her research work titled "Empathy and Attitude of Dental students towards geriatric patients". This was a knowledge-assessment questionnaire survey for the undergraduate students to assess their level of understanding empathy and its role in geriatric care. The award carried a Cash Prize of Rs.5,000/-, a Memento and a Certificate, presented at the National Conference held at St. John's Medical College, Bengaluru.

### The Research Team included



1. Dr. S. Sowmya, Lecturer, Department of Prosthodontics and Crown & Bridge;
2. Dr. R. Sushma, Lecturer, Department of Public Health Dentistry;
3. Dr. Laura, PG Student, Department of Prosthodontics and Crown & Bridge; and
4. Dr. R. Sumukh Bharadwaj, PG Student, Department of Conservative Dentistry & Endodontics

### Students' Achievements

**JSS Dental College & Hospital** organized the National Level T20 Cricket Championship from 5th-10th Dec. 2022. The following colleges participated in the said event:

1. M.S. Ramaiah College of Dental Science, Bangalore
2. Govt. Dental College, Bangalore
3. Manipal College of Dental Sciences, Mangalore
4. Rajiv Gandhi College of Dental Sciences, Bangalore
5. Rajarajeshwari College of Dental Sciences, Bangalore
6. Bangalore Institute of Dental Sciences, Bangalore
7. Savitha Dental College, Chennai
8. JSS Dental College and Hospital, JSSAHER, Mysuru.

JSS Dental College, Mysore won the Runners-up Trophy and also bagged the following individual prizes:

1. Sri Yeshwanth Gowda (Best Bowler)

2. Sri Kiran Kumar Surya (Best Batsman and Man of the Tournament

## Senior Teacher Gets Awards




Dr. B. Gurubasavaraja, Senior Professor and Former Chief Medical Officer, **JSS Ayurveda Medical College & Hospital, Mysuru** was awarded the Best Vaidya Award on 22.11.2022. The award was given by the Ayurveda Academy, Bangaluru, and was presented at a simple function arranged at Kannada Sahitya Parishat, Chamarajpet, Benagaluru.

Dr. Gurubasavaraja was also conferred with "Agnivesha Vaidya Ratna Prashasthi" on 8.12.2022, by Agnivesha Ayurveda Anushtana (An activity of Rashtrotthana Arogya Seva Kendra), Bengaluru, for his yeoman service in Ayurveda, over the past many years.

## JSS Public School, JSS TIS Campus, Mysuru



A CBSE National Gymnastics Championship was held in Gaudium School, Hyderabad from 24th - 27th Dec. 2022.

Kum. O. Shmitha, Grade V student, participated in this Championship.

## Sri Siddheshwara Swamiji Condoled



Sri Siddheshwara Swamiji of Sri Jnanayogashrama of Vijayapura breathed his last on 2.1.2023 at Vijayapura. He was known as the "WALKING GOD" of North Karnataka, a spiritual thinker and motivational speaker. The staff and students of **JSS Polytechnic for the Differently Abled, Mysuru** paid homage to the spiritual leader. Sri B. Elangovan, Principal, mentioned in his address that the Swamiji was closely associated with Sri Suttur Math, had participated in many functions of the Math and delivered many spiritual disclosures. He also mentioned that Swamiji's motivational speeches enlightened large number of people, and, he was also well-versed in many languages.

During the condolence meeting, the students and staff members observed two-minute silence for the departed soul.

***

A condolence meeting on the sad demise of Sri Siddheshwara Swamiji, Jnanayogashrama, Vijayapura, was held on 3.1.2023 at **JSS Group of Institution, Kollegal.**

Dr. M. Prabhu, Principal, JSS Women's College, expressed that Sri Siddheshwara Swamiji was known for his simplicity and knowledge. He was a great spiritualist and had a very cordial with JSS Math.

Sri Hemeshamurthy, Principal, JSS School of Nursing, Sri Mahadevaswamy, Principal, JSS PU College, faculties and students prayed for the departed soul. The audience observed two-minute silence as a mark of respect to the departed soul.

To quell my hunger
there are gifts of rice
To quench my thirst
there are tanks, streams, wells
To rest and sleep
there are dilapidated temples
and You *Lord Chennamallikarjuna*
are there for me as companion divine

**Akkamahadevi**

# JSS International School, Dubai



Dr. C.G. Betsurmath, Executive Secretary, JSS MVP presented Graduation Certificates to students at JSS International School, Dubai.



CISCE National Swimming Champions team with Mrs. Lata Nakra, Principal and Mr. Boban Chacko, HoD, PE department, along with Mr. Siva, coach.



JSS International School, Dubai, has been winners of National Championship, continuously for the last three years.

current team 'Nautilus' are the winners in -


1. Fastest car at F1 National Finals.

2. Track timings are the Fastest in the history of Yas Marina F1 in Schools.

Winners of the National Championship will represent the UAE in the World Finals to be held in Australia in July, 2023.




Mr. Shivaay Kumar - in the India Book of Records is a record holder for reading a maximum number of pages upside down.



Daniel Brauch Ronad of Grade 12 is the gold medallist in 4x100m relay at CISCE National Athletic Meet 2022-23, poses with coach, Mr. Boban Chacko.



ಶ್ರೀ ಸುತ್ತೂರು ಕ್ಷೇತ್ರದ ಕಪಿಲಾ ನದಿಯಲ್ಲಿ ವಿಜೃಂಭಣೆಯಿಂದ ಜರುಗಿದ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ತೆಪ್ಪೋತ್ಸವ (22 ಜನವರಿ 2023)



ಜಾತ್ರಾ ಮಹೋತ್ಸವದಲ್ಲಿ ದೀಪಾಲಂಕಾರದಿಂದ ಕಂಗೊಳಿಸುತ್ತಿರುವ ಶ್ರೀ ಸುತ್ತೂರು ಕ್ಷೇತ್ರ (21 ಜನವರಿ 2023)

**Registered with the Registrar of Newspapers for India No. KARBIL/2014/66470**
**'JSS Varthapathra' Monthly, Vol. 8, Issue No. 2, February 2023**




ಜೆಎಸ್‌ಎಸ್ ಆಸ್ಪತ್ರೆಯ ರಾಜೇಂದ್ರ ಶತಮಾನೋತ್ಸವ ಸಭಾಂಗಣದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವದ 12ನೇ ದತ್ತಿ ಉಪನ್ಯಾಸವನ್ನು ತಮಿಳುನಾಡು ರಾಜ್ಯಪಾಲರಾದ ಶ್ರೀ ಆರ್.ಎನ್. ರವಿಯವರು ಜಿ–20 ನಾಯಕತ್ವ : ಭಾರತದ ಅವಕಾಶಗಳು ಕುರಿತು ಉಪನ್ಯಾಸ ನೀಡಿದರು (4 ಫೆಬ್ರವರಿ 2023)



ಜಾತ್ರಾ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಕುಸ್ತಿ ಪಂದ್ಯಾವಳಿಗೆ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಎಸ್. ಬೊಮ್ಮಾಯಿಯವರು ಚಾಲನೆ ನೀಡಿದರು. ಶ್ರೀ ಆರ್. ಅಶೋಕ, ಶ್ರೀ ಬಿ.ಎಲ್. ಸಂತೋಷ್, ಡಾ. ಕೆ. ಸುಧಾಕರ್ ಮತ್ತು ಸಮಿತಿಯ ಸದಸ್ಯರುಗಳಿದ್ದಾರೆ (22 ಜನವರಿ 2023)

ಸಂಪಾದಕ: **ಡಾ. ಬಿ. ಪ್ರಭುಸ್ವಾಮಿ ಕಟ್ನವಾಡಿ** ನೆರವು: **ಆರ್.ಎಸ್. ಪೂರ್ಣಾನಂದ** ಸಹ ಸಂಪಾದಕ: **ಮ.ಗು. ಬಸವಣ್ಣ**
ಪ್ರಕಾಶಕರು: ಜೆಎಸ್‌ಎಸ್ ಮಹಾವಿದ್ಯಾಪೀಠ, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004
ದೂರವಾಣಿ: 0821–2548212 Extn. 223 * e-mail: jssmasapatrike@gmail.com * website: www.jssonline.org
ಮುದ್ರಣ: ಜೆಎಸ್‌ಎಸ್ ಪ್ರಿಂಟಿಂಗ್ ಪ್ರೆಸ್, ಮೈಸೂರು
**ಬಿಡಿ ಪ್ರತಿ 10 ರೂ.**